ತ್ತಿದ್ದೀರಿ, ಕಾರಿನಲ್ಲಿ ಹೋಗಬೇಕಾದರೆ ಅವಕಾಶ ಸಿಕ್ಕುವುದಿಲ್ಲ ಬಹಳ ತೊಂದರೆಯಾಗುತ್ತದೆ. ಒನ್ ವೇ ಟ್ರಾಫಿಕ್ ಮಾಡಿದ್ದೇವೆ. ದಯವಿಟ್ಟು ಬಸ್ ಓನರ್ಸ್‌ಗೆ ಬುದ್ಧಿವಾದ ಹೇಳಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

Re : Action taken on the disturbances at Mandya

ಶ್ರೀ ಕಾಗೋಡು ತಿಮ್ಮಪ್ಪ.— ಮಂಡ್ಯದಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಚ್. ಎಂ. ಚನಬಸಪ್ಪ.— ನಮಗೆ ಬಂದಿರತಕ್ಕ ಸಮಾಚಾರ ಮಾನ್ಯ ಸಭೆಯಲ್ಲಿ ಓದುತ್ತೇನೆ. ಬಸವರಾಜು ಎನ್ನತಕ್ಕವರು, 'ಮಂಜುನಾಥ್ ಬಸ್ ಪ್ರೊಪ್ರೈಟರ್' ಅವರು ಹಸ್ತಪತ್ರಿಕೆಯನ್ನು ಹೊರಡಿಸಿದ್ದಾರೆ, ಎಂದು ಎಲಿಗೇಷನ್ ಬಂದಿದೆ. ಕನ್ನಡದಲ್ಲಿ ಕೆಂಪು ಅಕ್ಷರದಲ್ಲಿ ಪ್ರಿಂಟ್ ಮಾಡಿದ್ದಾರೆ. ಆ ಕಾಪಿಯನ್ನು ಸೀಜ್ ಮಾಡಿ, ಅವರ ಮೇಲೆ ಕ್ರೈಮು ನಂ. ೭೯/೭೩ ಅಂಡರ್ ಸೆಕ್ಷನ್ ೧೫೩ (ಎ) ಮತ್ತು ೨೯೫ (ಎ) ಇಂಡಿಯನ್ ಪೀನಲ್ ಕೋಡ್‌ನ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿ, ಅವರನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಕೇಸ್‌ನ್ನು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ.

MYSORE MUNICIPAL LAWS (AMENDMENT) BILL 1973.

INTRODUCTION

Sri B. BASAVALINGAPPA (Minister for Municipal Administration) :

I beg to introduce :

"The Mysore Municipal Laws (Amendment) Bill, 1973"

Madam Speaker : The Bill is introduced.**

The Mysore Private Educational Institutions (Discipline and Control) Bill, 1973.

Motion to Consider

(Debate Contd)

†ಶ್ರೀ ಮಹೇಂದ್ರ ಕುಮಾರ ಕಲ್ಲಪ್ಪ (ಹುಲ್ಲೂರ).—ಮಾನ್ಯ ಅಧ್ಯಕ್ಷರೇ ಇವತ್ತು ಎಜ್ಯುಕೇಷನ್ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿ ಸಲುವಾಗಿ

** Bill reproduced as Annexure to this volume.

ನಾನು ತಮ್ಮನ್ನು ವಂದಿಸುತ್ತಾ ಕೆಲವು ನನ್ನ ವಿಚಾರಗಳನ್ನು ಸರ್ಕಾರದ ಮುಂದೆ ಇಡಲು ಇಷ್ಟಪಡುತ್ತೇನೆ.

ಅಧ್ಯಕ್ಷರೇ, ನಾವು ಸ್ವಾತಂತ್ರ್ಯಾನಂತರ ನಮ್ಮ ಸರ್ಕಾರವು ಈ ವಿದ್ಯಾಭ್ಯಾಸದ ಸಲುವಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಾ ಬಂದಿದೆ. ಇಲ್ಲಿಯ ವರೆಗೆ ಎಜ್ಯುಕೇಷನ್‌ಗೆ ಎಷ್ಟು ಮಹತ್ವ ಕೊಡಬೇಕು ಅಷ್ಟು ಮಹತ್ವ ಹಿಂದಿನ ಸರ್ಕಾರ ಕೊಡಲಿಲ್ಲ ಎಂದು ನನಗನ್ನಿಸುತ್ತದೆ. ಯಾತಕ್ಕೆಂದರೆ ಹೈದರಾಬಾದ ಕರ್ನಾಟಕದಲ್ಲಿ ಎಷ್ಟೋ ಹಳ್ಳಿಗಳಲ್ಲಿ ಸರ್ಕಾರಿ ಸಾಲೆಗಳಿಲ್ಲ. ಶಾಲೆಗಳು ಇದ್ದರೂ ಆ ಶಾಲೆಗಳಲ್ಲಿ ಮಾಸ್ಟರ ಕೂಡಲಿಕ್ಕೆ ಕುರ್ಚಿ ಕೂಡ ಆ ಶಾಲೆಯಲ್ಲಿ ಸಿಗಲಾರದಂಥ ಅನೇಕ ಶಾಲೆಗಳು ಇವೆ. ಇದೇ ರೀತಿಯಾಗಿ ಹುಡುಗರಿಗೆ ಯಾವ ರೀತಿ ಅನುಕೂಲ ಇರಬೇಕು, ವಿದ್ಯಾರ್ಥಿಗಳಿಗೆ ಯಾವ ರೀತಿ ವಿದ್ಯಾರ್ಜನೆ ಮಾಡುವುದಕ್ಕೆ ಸಹಾಯ ಮಾಡಬೇಕು ಅಂಥ ಸಹಾಯ ಏನು ಇದೆ ಅದು ಬಹಳಷ್ಟು ಸ್ಕೂಲ್‌ಗಳಲ್ಲಿ ಸಿಗುತ್ತಾ ಇಲ್ಲ. ನನಗೆ ತಿಳಿದ ಮಟ್ಟಿಗೆ ಈ ಸರ್ಕಾರದ ಎಜ್ಯುಕೇಷನ್ ಬಗ್ಗೆ ಸಿಟಿಗಳಿಗೆ ಮಹತ್ವ ಕೊಟ್ಟಿದ್ದರೂ ಸಹ ಹಳ್ಳಿಗಳ ಕಡೆಗೆ ಬಹಳಷ್ಟು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಕಾಲೇಜುಗಳಲ್ಲಿ ಅನೇಕ ಯೂನಿವರ್ಸಿಟಿಗಳಲ್ಲಿ ಅವಕ್ಕೆ ಬೇಕಾದ ಕಟ್ಟಡ ಆಗಲೀ ಅಥವಾ ಸ್ಟಾಫ್ ಬಗ್ಗೆಯಾಗಲೀ ಬೇಕಾದಷ್ಟು ಲಕ್ಷ್ಯಕೊಟ್ಟು ವ್ಯವಸ್ಥೆ ಮಾಡಿದ್ದಾರೆ ಆದರೆ ಹಳ್ಳಿಗಳನ್ನು ನೋಡಿದರೆ ಅಲ್ಲಿ ಸ್ಕೂಲ್ ಇಲ್ಲ, ಅಲ್ಲಿನ ಮಾಸ್ಟರ್ ಇರಲಿಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಈ ರೀತಿಯಾಗಿ ಹಳ್ಳಿಗಳಿಗೆ ನಿರ್ಲಕ್ಷ್ಯ ಆಗಿದೆ.

ಅಧ್ಯಕ್ಷರೇ, ಇವತ್ತು ಯಾವುದೇ ದೊಡ್ಡ ಆಫೀಸರು ಆಗಲೀ ಅಥವಾ ದೊಡ್ಡ ವಿದ್ಯಾವಂತರು ಆಗಲಿ ಅವರು ಬಂದಿರುವುದು ಹಳ್ಳಿಯಿಂದಲೇ. ಆದುದರಿಂದ ನಾವು ಈ ಹಳ್ಳಿ ಶಾಲೆಗಳಿಗೆ ಮಹತ್ವ ಕೊಡಬೇಕು ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಳ್ಳಿಗಳಿಂದ ಬರುವಂಥ ವಿದ್ಯಾರ್ಥಿಗಳು ಬಹಳ ಕಷ್ಟಪಡುತ್ತಾರೆ. ಅಲ್ಲಿ ಇರುವಂಥ ಟೀಚರ್ಸ್ ಬಹಳಷ್ಟು ಕಷ್ಟ ಅನುಭವಿಸಬೇಕಾಗುತ್ತದೆ, ಯಾತಕ್ಕೆಂದರೆ ಹಳ್ಳಿಯಲ್ಲಿ ಮಾಸ್ಟರ್ಸ್ ಇರುವುದಕ್ಕೆ ಮನೆ ಸಿಕ್ಕುವುದಿಲ್ಲ. ಒಂದು ವೇಳೆ ಮಾಸ್ಟರ್ ಇದ್ದರೆ ಮನೆ ಸಿಕ್ಕೀತು ಎಂದರೆ ಹುಡುಗರು ಸಿಕ್ಕುವುದಿಲ್ಲ. ಕೆಲವೊಂದು ಊರಿನಲ್ಲಿ ಒಬ್ಬ ಮಾಸ್ಟರ್ ಆ ಊರಿಗೇ ಹೋಗುವುದಿಲ್ಲ ಈ ರೀತಿ ಹಳ್ಳಿಗಳ ಸ್ಕೂಲುಗಳು ಬಹಳ ಅನ್‌ಕೇರ್ಡ್ ಫಾರ್ ಆಗಿದೆ. ಆದುದರಿಂದ ವಯವಿಟ್ಟು ಹಳ್ಳಿಗಳಲ್ಲಿರುವ ಸ್ಕೂಲ್‌ಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ

ಮತ್ತೊಂದು ವಿಷಯವನ್ನು ನಾನು ಹೇಳುವದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಹೈದರಾಬಾದ್ ಕರ್ನಾಟಕದಲ್ಲಿ, ಬೀದರನಲ್ಲಿ ಅನೇಕ ಗವರ್ನಮೆಂಟ್ ಶಾಲೆಗಳಿವೆ. ಅಲ್ಲಿ ಗವರ್ನಮೆಂಟ್ ಕಟ್ಟಡಗಳಿಲ್ಲ. ಆ ಕಟ್ಟಡಗಳ ಬಗ್ಗೆ ಹೆಚ್ಚಿನ ಗಮನಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಬೀದರ ಜಿಲ್ಲೆಯಲ್ಲಿ ಕೇವಲ ಒಂದೇ ಒಂದು ಬಿ ಟಿ ಟ್ರೈನಿಂಗ್ ಸ್ಕೂಲು ಇದೆ. ಅಲ್ಲಿ ಕೇವಲ ೫೦ ಜನರಿಗೆ ಟ್ರೈನಿಂಗ ಕೊಡುತ್ತಾರೆ ಮುಂದೆ ಅಪಾಯಿಂಟಮೆಂಟ್ ಆಗಬೇಕಾದರೆ ಸರಕಾರದವರು ಒಂದು ನಿಯಮ ಇಟ್ಟುಕೊಂಡಿದ್ದಾರೆ. ಅವರ ಪ್ರಕಾರ ಟ್ರೈನಿಂಗ್‌ಗೆ ಮಹತ್ವ ಕೊಡುತ್ತಾರೆ. ದಯವಿಟ್ಟು ಸರಕಾರಕ್ಕೆ ಬೇಡಿ ಕೊಳ್ಳುವದು ಏನೆಂದರೆ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಜೂನಿಯರ್ ಕಾಲೇಜುಗಳಿವೆ, ಆ ಕಾಲೇಜುಗಳಲ್ಲಿ ಬಿ.ಟಿ. ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಇಂಟರ್‌ಡ್ಯೂಸ್ ಮಾಡಿ. ವಿದ್ಯಾರ್ಥಿಗಳು ೨ ವರ್ಷ ಜೂನಿಯರ್ ಕಾಲೇಜು ಅಭ್ಯಾಸ ಮುಗಿಸಿ ಮುಂದೆ ಅಲ್ಲಿ ಓದುವದಕ್ಕೆ ಅನುಕೂಲವಾಗಬೇಕು ಈ ರೀತಿ ಸರಕಾರ ಬೀದರ್ ಜಿಲ್ಲೆಯಲ್ಲಿ, ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚಿನ ಮಹತ್ವಕೊಟ್ಟು ಪ್ರತಿಯೊಂದು ತಾಲ್ಲೂಕಿನಲ್ಲಿ ಬಿ. ಟಿ. ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಇಂಟರ್‌ಡ್ಯೂಸ್ ಮಾಡಬೇಕು ಎಂದು ನನ್ನ ಪ್ರಾರ್ಥನೆ. ಈಗ ಬಿ.ಟಿ.ಐ ಸ್ಕೂಲ್‌ನಲ್ಲಿ ಟ್ರೈನಿಂಗ್ ಟೀಚರ್ಸ್ ಇದ್ದಾರೆ, ಷೆಡ್ಯೂಲ್ಡ್ ಕ್ಯಾಸ್ಟ್ ಟೀಚರ್ಸ್ ಎನಿದ್ದಾರೆ ಅವರಿಗೆ ಹೌಸ್‌ರೆಂಟ್ ಹಿಂದಿನ ಸರಕಾರ ಕೊಡುತ್ತ ಇತ್ತು. ಈಗ ೩ ವರ್ಷದ ಹಿಂದೆ ಹೌಸ್‌ರೆಂಟ್ ಕೊಡವದನ್ನು ನಿಲ್ಲಿಸಿ ದ್ದಾರೆ. ಅಲ್ಲಿ ಕೆಲಸಮಾಡುವವರಿಗೆ ಅಥವಾ ಟ್ರೇನೀಸ್‌ಗೆ ಇದರಿಂದ ತೊಂದರೆ ಯಾಗಿದೆ. ಸರಕಾರ ಮೊದಲಿನಂತೆ ಹೌಸ್‌ರೆಂಟ್ ಕೊಡುವದನ್ನು ಜಾರಿಯಲ್ಲಿ ತರಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಟ್ರೈನಿಂಗ್ ಸೇರಿದವರಿಗೆ, ಡಿಪಾರ್ಟ್ ಮೆಂಟಗೆ ಹೋದವರಿಗೆ ಸ್ಟೈಫಂಡ ಕೊಡುತ್ತಾ ಇದ್ದಾರೆ. ಹೊಸದಾಗಿ ಬರು ವವರಿಗೆ ಸ್ಟೈಫಂಡ ಕೊಡುವದಿಲ್ಲ. ಹೊಸದಾಗಿ ಬಂದ ಕ್ಯಾಂಡೀಡೇಟ್ಸ್‌ಗೆ ಕೂಡ ಸ್ಟೈಫಂಡ ಕೊಡಬೇಕು ಎಂದು ಸರ್ಕಾರಕ್ಕೆ ಬೇಡಿಕೊಳ್ಳುತ್ತಾ, ನನಗೆ ಕೆಲವು ಮಾತುಗಳನ್ನು ಆಡುವದಕ್ಕೆ ಅನುಮತಿ ಕೊಟ್ಟ ಸಲುವಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್ (ಹೊಸನಗರ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ತಂದಿರತಕ್ಕ ಈ ಸುಧಾರಿತ ಬಿಲ್ ಏನಿದೆ ಅದಕ್ಕೆ ಹಾರ್ದಿ ವಾಗಿ ಸ್ವಾಗತ ಬಯಸುತ್ತೇನೆ. ಈ ಖಾಸಗಿ ವಿದ್ಯಾಸಂಸ್ಥೆಗಳಿಗೆ ಒಂದು ಇತಿಹಾಸ ಇದೆ. ಸ್ವಾತಂತ್ರ್ಯ ಬರಲಿಕ್ಕೆ ಮೊದಲು ರಾಷ್ಟ್ರೀಯ ಚಾರಿ ತ್ರ್ಯದ ಆಧಾರದ ಮೇಲೆ, ದೇಶದ ಮೇಲಿನ ಅಭಿಮಾನದ ಮೇಲೆ ಸ್ಥಾಪನೆ ಆದ ಖಾಸಗಿ ವಿದ್ಯಾಸಂಸ್ಥೆಗಳು ಆ ಕಾಲದಲ್ಲಿ ಪರಂಪರಾನುಗತವಾಗಿ ದೇಶದ ಪ್ರಜಾಸತ್ತೆಗೆ ರಾಷ್ಟ್ರೀಯ ಮನೋಭಾವ ಬೆಳೆಸತಕ್ಕ ಶಾಲೆಗಳು ಆಗಿದ್ದವು ಅಂತಹ ಒಂದು ಸಂಸ್ಥೆಗಳ ಅವಶ್ಯಕತೆ ಆ ಕಾಲದಲ್ಲಿ ಭಾರತ ದೇಶದಲ್ಲಿ ತುಂಬ ಇತ್ತು ಎಂದು ಹೇಳಬಹುದು. ಯಾವ ಬ್ರಿಟಿಷ್ ಸರಕಾರ ಸ್ಥಾಪಿಸಿದ ಕೇವಲ ಕಾರಕೂನರನ್ನು ತಯಾರು ಮಾಡುವಂಥ ಗುಲಾಮಗಿರಿ ಮನೋಭಾವ ಬೆಳೆಯುವಂಥ ಶಿಕ್ಷಣ ಕೊಡುವ ಶಾಲೆ ಏನಿತ್ತು, ಆ ಶಾಲೆಯನ್ನು ಮೂಲೋತ್ಪಾದನೆ ಮಾಡಿ, ಸ್ವಾತಂತ್ರ್ಯ ಯೋಧರನ್ನು ತಯಾರು ಮಾಡುವಂಥ ಖಾಸಗಿ ವಿದ್ಯಾಸಂಸ್ಥೆಗಳು ಆ ಕಾಲದಲ್ಲಿ

ಉದ್ಭವವಾಯಿತು. ಆವುಗಳಿಂದ ಭಾರತ ದೇಶದ ಜನಕ್ಕೆ ಉತ್ತಮವಾದ ಸೇವೆ ಆ ಕಾಲದಲ್ಲಿ ಸಂದಿತು. ಆದರೆ ಕ್ರಮೇಣ ಸ್ವಾತಂತ್ರ್ಯ ಬಂದನಂತರ ಪರಿಸ್ಥಿತಿ ಬದಲಾವಣೆ ಆಯಿತು. ವಿ ವ್ಯಸಂಸ್ಥೆಗಳು ಬಹುತೇಕ ಉದರಂಭರಣದ ಶಾಲೆಗಳಾಗಿ ಪರಿವರ್ತನೆಗೊಂಡುವು. ಯಾವ ಶಾಲೆಗಳಿಗೆ ಉಜ್ವಲ ಭವಿಷ್ಯವಿತ್ತೋ, ಯಾವ ಶಾಲೆಗಳು ಭಾರತ ದೇಶದ ಕಿರೀಟ ಪ್ರಾಯವಾಗಿದ್ದುವೊ, ಆಂಥಾ ವಿದ್ಯಾ ಸಂಸ್ಥೆಗಳು ಕೇವಲ ಉದರಂಭರಣಕ್ಕಾಗಿ ವ್ಯಾವಹಾರಿಕ ರೀತಿಯಾದಂಥ ವಿದ್ಯಾ ಸಂಸ್ಥೆಗಳಾಗಿ ಕೆಲಸ ಮಾಡಲು ದೇಶದಲ್ಲಿ ಪ್ರಾರಂಭವಾದುವು. ಕೇವಲ ತನ್ನ ಸಾಂಸಾರಿಕ ಹಿತಚಿಂತನೆಗಾಗಿ, ನಾವು ಉದ್ಯೋಗಕ್ಕಾಗಿ ಯಾವ ರೀತಿ ಕೈಗಾರಿಕೆ ಅಥವಾ ಇನ್ನೇನಾದರೂ ಉದ್ಯೋಗ ಪ್ರಾರಂಭ ಮಾಡುತ್ತೇವೋ ಆ ರೀತಿಯಲ್ಲಿ ಖಾಸಗಿ ಸಂಸ್ಥೆಗಳು ನಾಯಿಕೊಡೆಗಳಂತೆ ದೇಶದ ಮೂಲೆ ಮೂಲೆಗಳಲ್ಲಿ ಉದ್ಭವವಾದವು. ಇಂತಹ ವಿದ್ಯಾಸಂಸ್ಥೆಗಳಲ್ಲಿ ಆಗತಕ್ಕ ಅನ್ಯಾಯ ಅಷ್ಟಿಷ್ಟಲ್ಲ. ಬಹುತೇಕ ಎಲ್ಲಾ ವಿದ್ಯಾಸಂಸ್ಥೆಗಳು ಕೂಡ ಈ ರೀತಿ ಅನ್ಯಾಯ ಮಾಡುತ್ತಿವೆ ಎನ್ನುವ ಅರ್ಥದಲ್ಲಿ ನಾನು ಮಾತನಾಡಲಿಕ್ಕೆ ಬಯಸುವದಿಲ್ಲ. ಕೆಲವು ವಿದ್ಯಾಸಂಸ್ಥೆಗಳು ಇವತ್ತಿಗೂ ಉತ್ತಮವಾದ ಸೇವೆಯನ್ನು ಸಲ್ಲಿಸುತ್ತಿವೆ. ಉದಾಹರಣೆಗೆ ಹೇಳುವದಾದರೆ ಬೆಂಗಳೂರಿನ ನ್ಯಾಷನಲ್ ಕಾಲೇಜು ಇದೆ. ಇದರಂತೆ ಅನೇಕ ಉದಾತ್ತವಾದ ಸಂಸ್ಥೆಗಳಿವೆ.

ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟು, ಆತನ ವಿದ್ಯಾಭಿವೃದ್ಧಿಗೆ' ಆತನ ಚೇತನ ಶಕ್ತಿ ಹೊರ ಹೊಮ್ಮಿಸಲಿಕ್ಕೆ ಹೆಚ್ಚಿನ ನಿಗಾ ಕೊಟ್ಟು ಕೆಲಸ ಮಾಡತಕ್ಕ ವಿದ್ಯಾ ಸಂಸ್ಥೆಗಳು ಇವತ್ತಿಗೂ ಕೂಡ ಇವೆ. ಪ್ರತಿವರ್ಷ ಬರತಕ್ಕ ಪರೀಕ್ಷೆಯ ಫಲಿತಾಂಶ ಪರಿಗಣನೆಗೆ ತೆಗೆದುಕೊಂಡರೆ ಸರ್ಕಾರಿ ಸಂಸ್ಥೆಗಳಿಗಿಂತ ಖಾಸಗಿ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಉತ್ತಮವಾದ ಜ್ಞಾನ ಭಂಡಾರವನ್ನು ಗಳಿಸಿಕೊಂಡು ಪರಿಣತರಾಗಿ ಉತ್ತೀರ್ಣರಾಗಿ ಹೊರಗೆ ಬರತಕ್ಕ ವಿದ್ಯಾರ್ಥಿಗಳಿದ್ದಾರೆ. ಪ್ರತಿವರ್ಷ ರ್ಯಾಂಕ ಬರುವವರು ಖಾಸಗೀ ವಿದ್ಯಾ ಸಂಸ್ಥೆಗಳಲ್ಲಿ ಓದತಕ್ಕ ವಿದ್ಯಾರ್ಥಿಗಳು ಜಾಸ್ತಿ ಎನ್ನುವದು ಸತ್ಯಾಂಶ. ಆದರೆ ಇದರ ಹಿನ್ನೆಲೆಯಲ್ಲಿ ಇನ್ನೊಂದು ಮುಖ ಇದೆ. ಆ ಮುಖ ಶೋಷಣೆ. ಎರಡು ಹಂತದಲ್ಲಿ ಶೋಷಣೆ ನಡೆಯುತ್ತಿದೆ. ಒಂದು ಯಾವುದಾದರೂ ಶಾಲೆ ನಡೆಸಲಿಕ್ಕೆ ಲೈಸನ್ಸ ತೆಗೆದುಕೊಂಡು ನಡುವುದು. ಕೆಲವಾರು ನಿದರ್ಶನಗಳನ್ನು ಕಣ್ಣಾರೆ ಕಂಡಿದ್ದೇನೆ. ಕೆಲವು ಉಪಾಧ್ಯಾಯರಿಗೆ ೨೦೦ ರೂಪಾಯಿ ಸಂಬಳ ಇದ್ದರೆ, ೧೦೦ ರೂಪಾಯಿ ಸಂಬಳ ಕೊಟ್ಟು ೨೦೦ ರೂಪಾಯಿ ರಸೀದಿ ಕೊಡುವ. ವಿದ್ಯಾಸಂಸ್ಥೆಗಳಿವೆ ಉಪಾಧ್ಯಾಯನ ಮೇಲೆ ವಿನಾಕಾರಣ ಯಾವ ತರಹದ ಆಪಾದನೆಗಳು ಇಲ್ಲದೇ ಇದ್ದರೂ ಕೂಡ ತನ್ನ ಮೂಗಿನ ನೇರಕ್ಕೆ ನಡೆದುಕೊಳ್ಳಲಿಲ್ಲ ಎಂದು ಯಾವ ವಿಚಾರಣೆಯೂ ಇಲ್ಲದೆ ಹೊರಗೆ ಹಾಕುವ ವಿದ್ಯಾ ಸಂಸ್ಥೆಗಳಿವೆ.

ಇನ್ನು ಕೆಲವು ವಿದ್ಯಾ ಸಂಸ್ಥೆಗಳಲ್ಲಿ ಸರಕಾರದಿಂದ ಲಕ್ಷಾಂತರ ರೂಪಾಯಿ ಗಳಷ್ಟು ಗ್ರಾಂಟನ್ನು ಪಡೆದುಕೊಂಡು ಸರಕಾರಕ್ಕೆ ವಿರೋಧವಾಗಿ ರಾಜಕೀಯ

ಚಟುವಟಿಕೆಗಳೂ ನಡೆಯುತ್ತಿರುವದು ನಮಗೆ ಕಂಡುಬರುತ್ತಿವೆ. ವಿದ್ಯಾ ಸಂಸ್ಥೆಗಳು ರಾಜಕೀಯವಾಗಿ ಇಂದು ಪರಿಣಮಿಸುತ್ತಿವೆ. ಇಂತಹ ವಿದ್ಯಾ ಸಂಸ್ಥೆಗಳು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲೂ ಇವೆ, ಇಲ್ಲಿರುವ ಉಪಾಧ್ಯಾಯರುಗಳು ಯಾವುದೋ ಒಂದು ರಾಜಕೀಯ ಪಕ್ಷದಲ್ಲಿ ಪಾತ್ರವಹಿಸಿ ಅದರಲ್ಲಿ ನೇರವಾದ ಸಂಪರ್ಕ ಇಟ್ಟು ಕೊಂಡಿರುತ್ತಾರೆ. ಇಂತಹ ಕೆಲವರು ಜನಸಂಘದ ಪರವಾಗಿ ನೇರವಾಗಿ ಪಾತ್ರವಹಿಸಿ ಕೆಲಸ ಮಾಡುತ್ತಿರುತ್ತಾರೆ ಮತ್ತು ಇಲ್ಲಿ ಉಪಾಧ್ಯಾಯರಾಗಿಯೂ ಕೆಲಸ ಮಾಡುತ್ತಿರುತ್ತಾರೆ, ಇಂತಹ ಉಪಾಧ್ಯಾಯರುಗಳು ಕೆಲವು ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿದ್ದಾರೆ.

11-30 A.M.

Sri A. R BADARINARAYANA.—We find there are persons beloging to political affiliations in the Council and in the Assembly. We cannot prevent such people belonging to political affiliations being in such institutions.

ಶ್ರೀ ಎಸ್, ಎಂ. ಶೀರನಾಳಿ ಚಂದ್ರಶೇಖರ್.—ಕನಿಷ್ಟ ಪಕ್ಷ ಅಸೆಂಬ್ಲಿ ಸದಸ್ಯರಾಗಿ ರಾಜಕೀಯ ಪಕ್ಷದಲ್ಲಿದ್ದುಕೊಂಡು ವಿದ್ಯಾ ಸಂಸ್ಥೆಗಳಲ್ಲೂ ಉಪಾಧ್ಯಾಯರಾಗಿ ರತಕ್ಕವರು ರಾಜಕೀಯ ಕೆಲಸ ಮಾಡುವದು ಸೂಕ್ತವಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

Sri A. R. BADRINARAYANA.— Head Masters and Principals of such Colleges are in the Legislature.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.— ಇದನ್ನು ನಾನು ಏಕೆ ಹೇಳುತ್ತೇನೆಂದರೆ ಮಕ್ಕಳ ವಿದ್ಯಾಭ್ಯಾಸದ ಅಭಿವೃದ್ಧಿಗೆ ಇದರಿಂದ ಕುಂದಕವಾಗುತ್ತದೆ, ವಿದ್ಯಾಸಂಸ್ಥೆಗಳು ರಾಜಕೀಯ ಸಂಸ್ಥೆಗಳ ವೇದಿಕೆಯಾಗಿ ಪರಿವರ್ತನೆಯಾಗುತ್ತದೆ ಎನ್ನುವ ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಇನ್ನು ಅನುಚಾನವಾಗಿ ಬಂದಿರುವ ಇಂತಹ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಈಚೆಗೆ ಕೆಲವು ಅವ್ಯವಸ್ಥೆಗಳಾಗುತ್ತಿರುವುದನ್ನು ತಪ್ಪಿಸಲು ಇಂತಹ ಒಂದು ಬಿಲ್ಲನ್ನು ತಂದಿರುವುದು ಸೂಕ್ತ, ಈ ಬಿಲ್ಲಿನ ಕೆಲವು ಕ್ಲಾಸುಗಳನ್ನು ಓದಿದ್ದೇನೆ. ಕ್ಲಾಸು (೬) ರಲ್ಲಿ ಅಪೇಲುಗಳನ್ನು ಹಾಕುವದಕ್ಕಾಗಿ ಟ್ರಬ್ಯುನಲ್ ರಚಿಸುವಾಗ ಇದರಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಕೇಡರಿನವರು ಇರಬೇಕೆಂದು ಇದರಲ್ಲಿ ಮಾಡಲಾಗಿದೆ ಮತ್ತು ಆಯಾ ಜಿಲ್ಲೆಗಳಲ್ಲಿರುವ ಡಿಸ್ಟ್ರಿಕ್ಟ್ ಜಡ್ಜ್‌ರವರಿಗೇ ಇದನ್ನು ವಹಿಸಬೇಕೆಂದು ಮಾಡಿರುವುದು ನಿಜವಾಗಿಯೂ ಸ್ಮೃತ್ಯಾರ್ಹವಾದುದು. ಮಾನ್ಯ ವಿದ್ಯಾ ಮಂತ್ರಿಗಳು ಸರಿಯಾಗಿ ವಿಚಾರಮಾಡಿ ಜನರಿಗೆ ನ್ಯಾಯ ಒದಗಿಸಿಕೊಡುವುದಕ್ಕೆ ಇರುವ ನ್ಯಾಯಾಲಯಕ್ಕೆ ಇದನ್ನೂ ಸೇರಿಸಿರುವುದರಿಂದ ಸರಕಾರಕ್ಕೆ ಇದರಿಂದ ಹಚ್ಚಿನ ಹೊರೆ ಏನೂ ಬರುವದಿಲ್ಲ, ಇದಕ್ಕಾಗಿ ನಾನು ಅವರನ್ನು ಶ್ಲಾಘನೆ ಮಾಡುತ್ತೇನೆ. ಇನ್ನಿತರ ಕ್ಲಾಸುಗಳ ಬಗ್ಗೆ ವಿವರಣೆ

ಕೊಡಲು ಹೋಗುವುದಿಲ್ಲ, ಈ ಬಿಲ್ಲಿನಲ್ಲಿ ಶಿಕ್ಷೆಯ ಬಗ್ಗೆ ಕೂಡ ಅವಕಾಶ ಮಾಡಿದ್ದಾರೆ. ನಾನು ಮೊದಲೇ ಹೇಳಿದಂತೆ ಕೆಲವು ವಿದ್ಯಾ ಸಂಸ್ಥೆಗಳಲ್ಲಿ ಉಪಾಧ್ಯಾಯರಿಗೆ ೭೫೦ ರೂಪಾಯಿಗಳ ಸಂಬಳ ಎಂದು ರಶೀದಿ ಬರಿಸಿಕೊಂಡು ಉಪಾಧ್ಯಾಯರುಗಳಿಗೆ ಕೇವಲ ನೂರು ರೂಪಾಯಿಗಳಷ್ಟು ಮಾತ್ರ ಕೊಡುತ್ತಿದ್ದಾರೆ. ಇಂತಹ ಅನ್ಯಾಯ ಗಳನ್ನು ಹೇಳಲು ಉಪಾಧ್ಯಾಯರುಗಳು ಹೆದರುತ್ತಿದ್ದಾರೆ, ಆದುದರಿಂದ ಇಂತಹ ಅನ್ಯಾಯಗಳನ್ನು ತಪ್ಪಿಸಲು ಈ ಅಂಶವನ್ನು ಈ ಬಿಲ್ಲಿನಲ್ಲಿ ಅಳವಡಿಸಲು ಸರಕಾರ ಯೋಚಿಸಬೇಕೆಂದು ಸಲಹೆ ಮಾಡುತ್ತೇನೆ. ಇದಕ್ಕೂ ಒಂದು ಮಿತಿ ಇರಬೇಕು, ಇಂತಹ ವಿದ್ಯಾ ಸಂಸ್ಥೆಗಳು ಇಂದು ಅನೇಕ ಇವೆ. ಇಂತಹ ಅನ್ಯಾಯಗಳನ್ನು ಹತ್ತಿಕ್ಕಬೇಕು. ಇಂದು ವಿದ್ಯಾ ಸಂಸ್ಥೆಗಳನ್ನು ರಾಜಕೀಯಕ್ಕಾಗಿ ಉಪಯೋಗಿಸು ತ್ತಿರುವುದು ಜಾಸ್ತಿಯಾಗುತ್ತಿದೆ, ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಇಂದು ಕೆಲವು ಖಾಸಗಿ ವಿದ್ಯಾ ಸಂಸ್ಥೆಗಳು ವಿದ್ಯಾ ಸೇವೆ ಮಾಡಬೇಕೆಂದು ಮಾಡು ತ್ತಿವೆ. ಇವುಗಳಲ್ಲಿ ಕೆಲವು ಕಡೆ ಕ್ಯಾಪಿಟೇಷನ್ ಫೀಸ್ ಎಂದು ವಸೂಲು ಮಾಡು ತ್ತಾರೆ, ಕೆಲವು ಕಡೆ ಪರದೇಶಗಳಿಂದ ಬರುವವರು ಡಾಲರು ಲೆಕ್ಕದಲ್ಲಿ ಕೊಡುತ್ತಾರೆ. ಸುಮಾರು ೫೦–೬೦ ಸಾವಿರ ರೂಪಾಯಿಗಳಷ್ಟು ಫಾರಿನ್ ಎಕ್ಸ್‌ಚೇಂಜ್ ಬರುತ್ತಿದೆ. ಇಂತಹ ಅವ್ಯವಸ್ಥೆಗಳನ್ನು ತಪ್ಪಿಸಬೇಕು ಮತ್ತು ಸರಿಯಾದ ವ್ಯವಸ್ಥೆ ಮಾಡಬೇಕು ಇಷ್ಟು ಹೇಳಿ ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಮಾನ್ಯ ವಿದ್ಯಾ ಮಂತ್ರಿಗಳು ಇಂತಹ ಒಂದು ಬಿಲ್ಲು ತಂದುದಕ್ಕಾಗಿ ಅವರಿಗೆ ಶಹಬಾಸಗಿರಿ ಯನ್ನೂ ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA. — If I may intervene, inform the hon. member about some capitation fee which he mentioned. There is a Government Order issued, which I have placed on the Table. We should remember one thing that so far as private colleges are concerned, we are not giving any grant, not even naya paisa. They are running on their own excepting we are giving them clinical facilities, that is, some hospitals are attached for clinical work which is necessary for proper education. There was a time when these people had unlimited powers of doing whatever they liked and doing whatever they thought fit, where probably there was room for malpractices of the nature just now mentioned. I have made enquires after the Government Order is issued. Ev ry body knows that out of 100 admissions 25 will be at the discretion of the management exclusively. They can claim any capitation fee legally, provided they pass on receipt. So far that position is concerned, there is also a raider attached that so far as

Mysore students are concerned they shall not take more than Rs. 5000, if they are willing to pay. They cannot take more than 5000. So, they make money if there are other area people coming forward and they have passed on receipts. I have got it examined. Even if a boy from outside gives Rs. 50,000 they pass on receipt. To run a medical college they neen huge expenditure. The recurring expenditure will be about Rs. 20 to 22 lakhs per annum. For that they may need some noney and that is why the Govt. have thought fit to leave certain quota to their discretion, namely 25 per cent with a clause that so far Mysore Students are concerned they shall not take more than Rs. 5000. Added to that, 25% of the seats go to the Government pool. The Selection Committee will select according to merit. When such is the position, I do not think there is anything that can be done by the Government. Of course nothing prevents taking over these colleges, except financial aspect. A close watch is kept as to how they are working by putting two representatives of the legislature in each committee. The governing body has a majority of the Government nominees.

I learn there is a feeling that there may be some clause necessary to safeguard the interests of the staff as in the private colleges. This is a matter which will be examined, when we finalise the University for Health Sciences Bill. So far I know, most of this staff or at least half of them are deputed from the Government. They have taken from the Government; they get their usual salary att ched to the post and deputation allowance to which they are entitled to according to rules. I have not heard where any kind of injustice has been done. Therefore I would request the member to dispel from his mind that these people have unbridled power.

†ಶ್ರೀ ಕೆ ಶ್ರೀರಾಮುಲು (ಗಾಂಧಿನಗರ).— ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ತಂದಿರತಕ್ಕ ಖಾಸಗಿ ಪಾಠಶಾಲೆಗಳ ಬಗ್ಗೆ ಸಿಸ್ತು ಕಾಪಾಡುವ ದಕ್ಕಾಗಿ ಇಂತಹ ಒಂದು ಬಿಲ್ಲನ್ನು ತಂದಿರುವದು ಸ್ವಾಗತಾರ್ಹವಾದ ವಿಷಯ. ಈ ಬಿಲ್ಲಿನ ಬಗ್ಗೆ ಹಲವಾರು ವಿಷಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಇದರಲ್ಲಿ ಒನ್ನೊಂದು ಸಂತೋಷಪಡತಕ್ಕ ವಿಷಯ ಎಂದರೆ ಕಳೆದ ಇಪ್ಪತ್ತೈದು

ವರ್ಷಗಳಿಂದಲೂ ಈ ಖಾಸಗಿ ಪಾಠಶಾಲೆಗಳಲ್ಲಿ ಇದ್ದ ಉಪಾಧ್ಯಾಯರುಗಳ ಅನೇಕ ತೊಂದರೆಗಳಿಗೆ ಸಿಕ್ಕಿ ಕಷ್ಟಪಡುತ್ತಿದ್ದರು. ಇಂತಹ ಸಂಸ್ಥೆಗಳನ್ನು ಒಂದು ಶಿಸ್ತಿಗೆ ಒಳಪಡಿಸಲು ಹಾಗೂ ಉಪಾಧ್ಯಾಯರುಗಳಿಗೆ ಅನುಕೂಲ ಮಾಡಬೇಕು ಎಂದು ಇಲ್ಲಿ ಬಿಲ್ಲನ್ನು ತಂದು ಇದರಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ, ಇನ್ನೂ ಅನೇಕ ವಿಚಾರಗಳು ಇದರಲ್ಲಿ ಬರಬಹುದಾಗಿತ್ತು.

ಈ ದೇಶದಲ್ಲಿ ಬಡವರಿಂದ, ರೈತರಿಂದ, ಕಾರ್ಮಿಕರಿಂದ ವಸೂಲಾಗತಕ್ಕ ತೆರಿಗೆಯ ಹಣದಲ್ಲಿ ೬೭ ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸದ ಇಲಾಖೆಗೆ ಕೊಟ್ಟರೂ ಕೂಡ ಅದರಲ್ಲಿ ೮೫ ಪರ್ಸೆಂಟ್ ಖಾಸಗಿ ಶಾಲೆಗಳಿಗೆ ಕೊಡುತ್ತಿದ್ದಾರೆ. ದೇಶದ ಜನತೆಗೆ ಒಳ್ಳೆಯ ವಿದ್ಯಾಭ್ಯಾಸ ದೊರೆಯಬೇಕು ಎನ್ನುವ ವಿಶಾಲ ದೃಷ್ಟಿಯಿಂದ ಕೊಡುತ್ತಿದ್ದಾರೆ. ಜಾತ್ಯಾತೀತ ರಾಷ್ಟ್ರವೆಂದು ನಾವು ಹೇಳಿಕೊಂಡು ಅನೇಕ ರೀತಿಯ ತೆರಿಗೆಗಳನ್ನು ವಸೂಲು ಮಾಡಿ ಖಾಸಗಿ ಶಾಲೆಗಳಿಗೆ ಗ್ರಾಂಟ್ ಕೊಡುತ್ತಿರುವಾಗ ಅಲ್ಲಿ ನಡೆಯುತ್ತಿರುವುದಾದರೂ ಏನು ಎಂದು ನೋಡುವುದಾದರೆ, ಅಲ್ಲಿ ಜಾತಿಗಳನ್ನು ಬೆಳೆಸುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಯಾರು ಖಾಸಗಿ ಶಾಲೆಗಳನ್ನು ನಡೆಸುತ್ತಾರೆ ಅವರು ಒಂದೊಂದು ಕೋಮಿಗೆ ಸೇರಿದವರನ್ನೇ ತಮ್ಮ ಕೋಮಿನವರನ್ನೇ ಉಪಾಧ್ಯಾಯರಾಗಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಎಲ್ಲರಿಗೂ ಉಪಯೋಗವಾಗಲಿ ಎನ್ನುವ ದೃಷ್ಟಿ ಸರ್ಕಾರಕ್ಕೆ ಇದೆ ಮತ್ತು ಆ ದೃಷ್ಟಿಯಿಂದ ಹಣವನ್ನು ಕೊಡುತ್ತಿದ್ದಾರೆ. ಎಷ್ಟೋ ಜನ ವಿದ್ಯಾವಂತರಾಗಿರುವವರಿದ್ದಾರೆ. ಅಂಥವರಿಗೆ ಖಾಸಗಿ ಶಾಲೆಗಳಲ್ಲಿ ಅವಕಾಶ ಸಿಕ್ಕುವುದಿಲ್ಲ. ಹರಿಜನರಿಗಾಗಲೀ, ಇತರ ಹಿಂದುಳಿದ ವರ್ಗಗಳವರಿಗಾಗಲೀ ಅವಕಾಶ ಸಿಕ್ಕುತ್ತಿಲ್ಲ. ಖಾಸಗಿ ಶಾಲೆಗಳವರು ಅವರವರಜಾತಿಯವರನ್ನೇ ಇಟ್ಟುಕೊಳ್ಳುವುದಾದರೆ ಸರ್ಕಾರದಿಂದ ಏಕೆ ಗ್ರಾಂಟನ್ನು ಕೊಡಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಆದುದರಿಂದ ದಯವಿಟ್ಟು ಮಾನ್ಯಮಂತ್ರಿಗಳು ರೂಲ್ಸ್ ಮಾಡುವಾಗ ಉಪಾಧ್ಯಾಯರು ಯಾವ ಕೋಮಿನವರಾದರೂ ಕೂಡ ಧಾರಾಳವಾಗಿ ಎಲ್ಲರಿಗೂ ಅವಕಾಶ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ನನ್ನ ಒತ್ತಾಯ ಪೂರ್ವಕವಾದ ವಿನಂತಿ.

ಇನ್ನೊಂದು ಆಶ್ಚರ್ಯಕರವಾವ ವಿಚಾರವೇನಂದರೆ, ಖಾಸಗಿ ಪಾಠಶಾಲೆಗಳನ್ನು ಸ್ಥಾಪನೆ ಮಾಡಿ ಮೊದಲು ಮೂರು ನಾಲ್ಕು ವರ್ಷ ಕಳೆದು ಐದನೆಯ ವರ್ಷಕ್ಕೆ ಕಾಲಿಡುವಾಗ ಅವುಗಳನ್ನು ಸ್ಥಾಪನೆ ಮಾಡಿದವರು ಬಂಗಲೆಗಳನ್ನು ಹೊಂದಿ, ಕಾರುಗಳನ್ನಿಟ್ಟುಕೊಂಡು ಐಶ್ವರ್ಯಭಣೆಯಿಂದ ಜೀವನ ನಡೆಸುತ್ತಾರೆ. ಇದು ಹೇಗೆ ಸಾಧ್ಯ ? ದೇಶದಲ್ಲಿ ಅನೇಕ ತೊಂದರೆಗಳಿಗೊಳಪಟ್ಟು ಬೊಕ್ಕಸದಿಂದ ದುಡ್ಡು ಕೊಟ್ಟು ನಾಲ್ಕೈದು ವರ್ಷದಲ್ಲಿ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುವುದಕ್ಕೆ ಅವಕಾಶವಿದೆ ಎಂದರೆ ಹೇಗೆ ಸಾಧ್ಯ ? ಇದು ನಮ್ಮ ತಪ್ಪು. ಸರ್ಕಾರದ ಹತೋಟಿ ಅವರ ಮೇಲೆ ಇಡದೇ ಇದ್ದುದೇ ಇದಕ್ಕೆ ಕಾರಣವೆಂದು ನಾನು ಹೇಳಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಅನೇಕ ಶಾಲೆಗಳನ್ನು ನಾನು ನೋಡುತ್ತೇನೆ. ಮನೆಯಿಲ್ಲಿರುವ

ಹೆಣ್ಣುಮಕ್ಕಳನ್ನು ಪಾಠಶಾಲೆಗಳಲ್ಲಿ ಉಪಾಧ್ಯಾಯರು ಎಂದು ತೋರಿಸಿ ಸಂಬಳ ಪಡೆಯತಕ್ಕ ನಿದರ್ಶನಗಳಿವೆ. ಅವರು ಪಾಠಶಾಲೆಗಳಿಗೆ ಹೋಗಿ ಪಾಠ ಹೇಳುವುದಿಲ್ಲ, ಆದರೆ ಉಪಾಧ್ಯಾಯರುಎಂದು ಸಂಬಳವನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಇನ್ನು ಮುಂದೆ ಪಾಠಶಾಲೆಗಳ ಸ್ಥಾಪನೆ ಮಾಡುವ ಮತ್ತು ಈಗಾಗಲೇ ಇರುವಂಥ ಶಾಲೆಗಳ ಪ್ರಿನ್ಸಿಪಾಲರುಗಳು ಅಥವಾ ಮ್ಯಾನೇಜಮೆಂಟಿನವರು ಯಾರು ಇರುತ್ತಾರೆ ಅವರ ಆಸ್ತಿಪಾಸ್ತಿಗಳೇನಿವೆ ಎನ್ನುವುದರ ಬಗ್ಗೆ ಎಂದು ಡಿಕ್ಲೇರೇಶನ್ ತೆಗೆದುಕೊಂಡು ಅವರಿಗೆ ಹಣ ಕೊಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ರೂಲ್ಸ್‌ನಲ್ಲಿ ಮಾಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಇನ್ನೂ ಒಂದು ಮಾತು ಹೇಳುವುದಾದರೆ ನನ್ನಂಥ ಶಾಸಕರನ್ನು ಸೇರಿಸಿಕೊಂಡು ಯಾರು ಶಾಸಕರಾಗಿ ಬರುತ್ತಾರೆ, ಯಾರು ಅಧಿಕಾರಕ್ಕೆ ಬರುತ್ತಾರೆ ಅವರು ಶಾಸಕರಾದಾಗ ಅಥವಾ ಅಧಿಕಾರವನ್ನು ಸ್ವೀಕಾರ ಮಾಡಿದಾಗ ಇರತಕ್ಕ ಆಸ್ತಿಪಾಸ್ತಿಗಳೇನು ಮತ್ತು ಅಲ್ಲಿಂದ ಹೋಗುವಾಗ ಏನು ಆಸ್ತಿಪಾಸ್ತಿಗಳಿವೆ ಎನ್ನುವದರ ಬಗ್ಗೆ ಒಂದು ಘೋಷಣೆಯನ್ನು ಮಾಡಿದರೆ ದೇಶ ಸುಲಲಿತವಾಗಿ ಇರುವದಕ್ಕೆ ಮತ್ತು ನಾವೆಲ್ಲರೂ ನ್ಯಾಯವಂತರಾಗಿ ನಡೆದುಕೊಳ್ಳುವದಕ್ಕೆ ಅವಕಾಶವಾಗುತ್ತದೆ. ಬರೀ ಶಿಕ್ಷಣಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಮಾತ್ರವಲ್ಲದೆ ಎಲ್ಲ ರಂಗಗಳಿಗೂ ಅನ್ವಯವಾಗುವಂತಹ ಒಂದು ಕಾನೂನು ತರಬೇಕೆಂದೂ ಹೇಳುತ್ತೇನೆ.

ಶ್ರೀ ಎ. ಆರ್. ಬದರೀನಾರಾಯಣ್.— ಸಭೆಯ ಮುಂದೆ ಮಸೂದೆಯನ್ನು ಇಲ್ಲೀಗಲ್ ಟರ್ಮಿನೇಷನ್ ಆಫ್ ಟೀಚರ್ಸ್ ಏನು ನಡೆಯುತ್ತಿದೆ ಅದನ್ನು ತಪ್ಪಿಸುವುದಕ್ಕೋಸ್ಕರ ತಂದಿರುವುದಾಗಿದೆ ಮಾನ್ಯ ಸದಸ್ಯರು ಹೇಳತಕ್ಕ ವಿಚಾರಗಳು ಬಹಳ ಮುಖ್ಯವಾದುದಾಗಿವೆ. ನೇಮಕಗಳನ್ನು ಮಾಡತಕ್ಕ ಕಾಲದಲ್ಲಿ ಜಾತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುತ್ತಾರೆ, ಒಂದೇ ಸಂಸಾರದಲ್ಲಿರುವರನ್ನು ನೇಮಕ ಮಾಡುತ್ತಾರೆ ಎನ್ನತಕ್ಕ ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈ ವಿಚಾರದಲ್ಲಿ ಒಂದು ಸಮಗ್ರ ಶಾಸನವನ್ನು ತರಬೇಕೆನ್ನುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡು ಒಂದು ಸಮಿತಿಯನ್ನು ನೇಮಕ ಮಾಡಿದೆ. ಮಾನ್ಯ ಸದಸ್ಯರು ಆ ಕಮಿಟಿಯ ಮುಂದೆ ದಯವಿಟ್ಟು ಈ ವಿಚಾರಗಳನ್ನೆಲ್ಲ ತಿಳಿಸಿದರೆ ಸಮಗ್ರ ಕಾನೂನು ಮಾಡುವುದಕ್ಕೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಕೆ. ಶ್ರೀರಾಮುಲು.— ಸಮಿತಿಯ ಮುಂದೆಯೂ ಹೇಳುತ್ತೇನೆ. ಸಭೆಯ ಸದಸ್ಯನಾಗಿ ದೇಶದಲ್ಲಿ ನಡೆಯುತ್ತಿರುವ ವಿಚಾರಗಳನ್ನು ಸಭೆಯಲ್ಲಿ ಹೇಳಿದರೆ ಅಪರಾಧವಾಗುವುದಿಲ್ಲ

ಖಾಸಗಿ ಶಾಲೆಗಳನ್ನು ನಡೆಸುವವರು ನಾಲ್ಕೈದು ವರ್ಷಗಳಲ್ಲಿ ಲಕ್ಷಾಂತರ ರೂಪಾಯಿ ಆಸ್ತಿಪಾಸ್ತಿಗಳನ್ನು ಮಾಡುತ್ತಿರುವುದನ್ನು ತಪ್ಪಿಸಿ ಒಂದು ಶಿಸ್ತಿಗೆ ಒಳಪಡಿಸ ತಕ್ಕದ್ದು ಒಳ್ಳೆಯದು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಈ ಸಂಗತಿ ವಿದ್ಯಾ ಇಲಾಖೆಗೆ ಗೊತ್ತಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ವಿದ್ಯಾ ಇಲಾಖೆಗೆ

ಇದೆಲ್ಲ ಗೊತ್ತಿರುತ್ತದೆ. ಈ ದೇಶದಲ್ಲಿ ಒಂದು ಕೆಲಸವಾಗಬೇಕು ಎಂದು ಯಾರಾದರೂ ಬಯಸುವುದಾದರೆ, ಯಾವದೇ ಸರ್ಕಾರ ಬಯಸುವುದಾದರೆ ಮಂತ್ರಿಗಳು, ಸಭೆಯ ಸದಸ್ಯರು ಮಾತ್ರ ಸೇರಿಕೊಂಡರೆ ಒಳ್ಳೆಯದಾಗುವುದಕ್ಕೆ ಸಾಧ್ಯವಿಲ್ಲ. ನಾವೂ ನೀವೂ ಸೇರಿ ಮಾಡಿದ ತೀರ್ಮಾನಗಳನ್ನು ಜಾರಿಗೆ ಕೊಡುವವರ ಕೈಯಲ್ಲಿ ದೇಶದ ಭವಿಷ್ಯ ವಿದೆ. ಅವರು ಪ್ರಮಾಣಪೂರ್ವಕವಾಗಿ ನಡೆಯದೆ ಇದ್ದರೆ ಯಾವುದೇ ಕಾನೂನು ತಂದರೂ, ಯಾವುದೇ ನಿಯಮಗಳನ್ನು ಮಾಡಿದರೂ ಅವನ್ನು ತಪ್ಪಿಸಿಕೊಂಡು ಹೋಗುವುದಕ್ಕೆ ಅವಕಾಶವಿರುತ್ತದೆ ಎಂದು ಮಾತ್ರ ಹೇಳುತ್ತೇನೆ.

ಮಕ್ಕಳು ಆಟಪಾಟಗಳನ್ನು ಆಡುವುದಕ್ಕೆ ಸಾಕಾದಷ್ಟು ಮೈದಾನಗಳಿಲ್ಲ. ಇರುವ ಮೈದಾನಗಳಲ್ಲಿ ಕೂಡ ಜನಸಂಘದವರು ಅಥವಾ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಝಾಂಡ ಹಾಕಿಕೊಂಡು ವ್ಯಾಯಾಮ ಮಾಡುತ್ತಿರುತ್ತಾರೆ ಇದರಿಂದ ಶಾಲೆಯ ಮಕ್ಕಳಿಗೆ ಆಡುವುದಕ್ಕೆ ಆಟದ ಮೈದಾನವೇ ಇಲ್ಲದಂತಾಗಿದೆ. ಇದರ ಬಗ್ಗೆ ಏನಾದರೂ ಕಾನೂನು ಬೇಕಾದರೂ ತಂದು ಇಂಥದನ್ನು ತಡೆಗಟ್ಟಬೇಕು. ಮಕ್ಕಳಿಗೆ ಆಟಪಾಟಗಳಿಲ್ಲದೆ ಇದ್ದರೆ ಆರೋಗ್ಯ ಸರಿಯಾದ ರೀತಿಯಲ್ಲಿ ಇರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆಯೂ ಗಮನ ಕೊಡಬೇಕೆಂದು ಹೇಳುತ್ತೇನೆ.

ಎಲ್ಲ ಕೋವಿನವರಿಗೂ ಕೂಡ ಪ್ರತಿಯೊಂದು ಖಾಸಗಿ ಶಾಲೆಯಲ್ಲಿಯೂ ಉಪಾಧ್ಯಾಯರಾಗಿ ಬರುವುದಕ್ಕೆ ಅವಕಾಶವಿರಬೇಕು, ಖಾಸಗಿ ಶಾಲೆಗಳನ್ನು ನಡೆಸುತ್ತಿರುವವರು ಮತ್ತು ಮುಂದೆ ನಡೆಸುವವರು ತಮ್ಮ ಆಸ್ತಿಪಾಸ್ತಿಗಳನ್ನು ಮೊದಲು ಘೋಷಣೆ ಮಾಡಬೇಕು, ಮತ್ತು ಮಕ್ಕಳು ಆಡುವುದಕ್ಕೆ ಸರಕಾರಿ ಖಾಸಗಿ ಶಾಲೆಗಳಾಗಲೀ, ಆಟದ ಮೈದಾನಗಳಿರಬೇಕು, ಮತ್ತು ಜನಸಂಘದವರಿಂದಾಗಲೀ ರಾಷ್ಟ್ರೀಯ ಸ್ವಯಂಸೇವಕ ಸಂಘದವರಿಂದಾಗಲೀ, ಯಾರಿಂದಲೇ ಆಗಲೀ ಆಟದ ಮೈದಾನಗಳಲ್ಲಿ ಅಡಚಣೆ ಮಾಡುವುದಕ್ಕೆ ಅವಕಾಶವಿರಬಾರದು, ಇದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri B. SUBBAIAH SHETTY (Suratkal).— Madam Speaker, I am glad that that the Government has taken steps to see that the private institution maintain a code of conduct and that they ensure satisfactory conditions of service their employees. The object of this Bill is limitted, and that is to give protection to the employees employed in the private educational institutions. The spirit is laudable and to translate it into action certain other steps could be taken in this Bill it elf. One is regarding sub-clause (2) of clause 4.

"No employee shall be dismissed or removed or reduced exept after an enquiry"

I wouldlike to know what sort of an enquiry is this? We have got experience of this enquiry in the private Industrial managements where a similarly enquiry is pre scribed. It is known as 'domestic' enquiry. This domestic enquiry has already become a farce. It is a well known fact. I would request the Hon. Minister through you Madam, that this enquiry also should not be a farce. It should not be of the nature of nature of domestic enguiry adopted by these industrial institutions and I hope at least in the rules due provision wonld be made.

Sri A. R. BHADRINARAYAN.— There is already a provision in the rules that there should be the DDPI of the district on the commttee of enquiry. An officer will be there.

Sri B. SUBBIAH SHETTY.— If that is made applicable to this Act, it would serve the purpose.

Another thing is, the immidiate provocation for this Bill is the illegal termination of number of employees and these unfortunate people who provoked the introduction of this Bill do not find any solace in this Bill. I think these dissmissed employees whose cases are pending now with certain authorities, should given three months time to file an appeal, to the tribunal. Perhaps, it cannot be said that this is going to have retrospective effect, but giving some facilities for these unfortunate employees who have been illegally terminated.

Another point, I would like to make is regarding clause 3(2): relating to the rules and rgulations relating to the code of conduct and conditions of service. It is not rather correct to expect the private managements to submit their rules and regulations. To give justice to the employees in the spirit which is lying behind this legislation and also in order to give a touch of uniformity to these rules, I think the Government should frame a set of model rules and supply to the private managements.

Another fact that I would like to bring to the kind notice of the Government is, there are instances where certain private managements deliberately with an intention to close their establishments have been violating the directions given by the Government. And there is also likelyhood that even these rules and the provisions of this Act may be flouted with the deliberate intention of getting their establishments closed. In such a case, I think it would be proper to make provision for the Government to take over such institutions who deliberately and persistently flout the provisions of this Act.

Another fact I would like to bring to your notice is that in making the model rules, the Government should also embody the suggestions put forward by my friends Sri Sheranaly Chandrashekhar and Sri Sreeramulu, namely, if any institution carries on pernicious communal propaganda, within the institution, such institution should be taken over.

With these words, Madam Speaker, I conclude my speech.

†Sri A. R. BADRI NARAYAN.— I have already explained the scope of this Bill. If there is any thing more, I will say at the time of amendments. I request that the consideration may be put to the House.

MADAM SPEAKER.—I will put the consideration motion to the vote of the House. The question is:

> "That the Mysore Private Educational Institutions (Discipline and Control) Bill 1973 be taken into consideration."

The motion was adopted

Clause 2

MADAM SPEAKER.— There are no amendments to Clause 2.

The question is:

> "That clause 2 do stand part of the Bill."

The motion was adopted

Clause 2 was added to the Bill.

Clause 3

MADAM SPEAKER.— Clause 3. There are amendments by Sri T. R. Shamanna and also by Sri M. S. Krishnan. They may move the amendments :

Sri T. R. SHAMANNA.— I beg to move the following amendments ;

1. That at page 3, sub-clause (1) (i) after the words "grades of pay" the words "pay fixed and pay actually paid" shall be added ;

2. That at page 3, sub-clause (ii) at the end the following words shall be inserted :

"and the duties of the teacher"

MADAM SPEAKER — Amendment moved:

That at page 3, sub-clause (1) (i) after the words "grades of pay" the words "pay fixed and pay actually paid" shall be added.

That at page 3, sub-clause (ii) at the end the following words shall be inserted:

"and the duties of the teacher."

Sri M S. KRISHNAN may also move his amendment.

Sri M. S. KRISHNAN.— I beg to move the following amendment :

"That at page 3, sub clause (1) (i) after the words "grades of pay" the words" date of entry into service, designation" shall be added :

"That at page 3, sub-clause (1) (ii) at the end the following words shall be inserted :

"which shall be in accordance with Model Rules prescribed and published by the Government."

MADAM SPEAKER.— Amendment moved :

"That at page 3, sub-clause (1) (i) after the words "Grades of pay" the words "date of entry into service, designation" shall be added:

"That at page 3, sub-calsue (1) (ii) at the end the following words shall be inserted"

"Which shall be in accordance with Model Rules prescribed and published by the Government."

†ಶ್ರೀ ಟಿ ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರತಕ್ಕ ವಿಧಾಯಕದ ಮೂರನೆ ಕಲಮಿನ (೧) (ಎ) ರಲ್ಲಿ ಗ್ರೇಡ್ ಆಫ್ ಪೇ ಆದಮೇಲೆ "Pay fixed and pay actually paid" shall be added ಎಂದು ತಿದ್ದುಪಡಿ ತಂದಿದ್ದೇನೆ ಕಾರಣವಾವರೂ ಇಷ್ಟೆ ಈಗ ಸರ್ಕಾರದವರು ಖಾಸಗಿ ಶಾಲೆಗಳನ್ನು ನಡೆಸತಕ್ಕವರು ಉಪಾಧ್ಯಾಯರಿಗೆ ದ್ರೋಹ ಮಾಡಿದ ಹಾಗೆ, ನ್ಯಾಯವಾಗಿ ಸಂಬಳ ಕೊಡಬೇಕು ಎಂದು ಹೇಳಿ ಚೆಕ್ ಮುಖಾಂತರ ಸಂಬಳವನ್ನು ಒದಗಿಸಿ ಕೊಡುತ್ತಿದ್ದಾರೆ. ಇದು ಶ್ಲಾಘನೀಯವಾದ ಕೆಲಸ ಚೆಕ್ ಕೊಡುವದಕ್ಕೆ ಮುಂಚೆ, ಅನೇಕ ಖಾಸಗಿ ಸಂಸ್ಥೆಗಳು ಸಂಬಳ ಕೊಡತಕ್ಕದ್ದು ಒಂದು, ಆಕ್ವಿಟೆನ್ಸ್ ತೆಗೆದುಕೊಳ್ಳತಕ್ಕದ್ದು ಒಂದು ಏನೋ ಕೆಲಸವಿಲ್ಲದೆ ಕಷ್ಟಪಡುತ್ತಿರುವವರು ಬಂದದ್ದು ಬರಲಿ ಎಂದು ಕೊಟ್ಟ ಸಂಬಳ ತೆಗೆದುಕೊಂಡು ಇಚ್ಛೆ ಇಲ್ಲದೆ ಹೆಚ್ಚಿನ ಸಂಬಳಕ್ಕೆ ರುಜು ಹಾಕುತ್ತಿದ್ದರು ಈಗ ಸರ್ಕಾರದವರು ಚೆಕ್ ಮುಖಾಂತರ ಹಣವನ್ನು ಕೊಡಬೇಕೆಂದು ನಿಬಂಧನೆ ಮಾಡಿ ಚೆಕ್‌ಗಳನ್ನು ಕಳುಹಿಸಿಕೊಟ್ಟರೂ ಕೂಡ ಉಪಾಧ್ಯಾಯರನ್ನು ನೇಮಿಸಿಕೊಳ್ಳುವಾಗ ಮುಖ್ಯವಾಗಿ ಲೇಡಿ ಟೀಚರ್ಸ್‌ನ್ನು ಸೇರಿಸಿಕೊಳ್ಳುವಾಗ ಇಷ್ಟೇ ಕೊಡತಕ್ಕದ್ದು ಇಷ್ಟಕ್ಕೆ ರುಜು ಹಾಕಬೇಕೆಂದು ಅವರ ಹತ್ತಿರ ಒಂದು ಒಪ್ಪಂದ ಮಾಡಿಕೊಂಡು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ.

ಚಾಮರಾಜಪೇಟೆಯಲ್ಲಿ ನಡೆಯತಕ್ಕ ಒಂದು ಸ್ಕೂಲಿನಲ್ಲಿ ಉಪಾಧ್ಯಾಯನಿಯೊಬ್ಬರು ಒಂದು ದಿವಸ ನನ್ನ ಹತ್ತಿರ ಬಂದು ಹೇಳಿದರು. ೨೫೦ ರೂಪಾಯಿ ಸಂಬಳ ಬರೆಸಿಕೊಂಡು ಕೇವಲ ೧೭೦ ರೂಪಾಯಿ ಮಾತ್ರ ಕೊಡುತ್ತಿದ್ದಾರೆ ಎಂದು ಆಕೆ ಬಹಳ ವ್ಯಥೆ ಪಟ್ಟುಕೊಂಡು ಹೇಳಿದರು. ನನಗೆ ಶಾಲೆಯಲ್ಲಿ ಕೊಡತಕ್ಕ ೧೦೦ ರೂ. ಗಳಲ್ಲಿ ಜೀವನ ಮಾಡುವದಕ್ಕೆ ಕಷ್ಟವಾಗುತ್ತಿದೆ, ನಾನು ವಿಧವೆ ಎರಡು ಮಕ್ಕಳನ್ನು ಇಟ್ಟುಕೊಂಡು ಸಾಕತಕ್ಕದ್ದು ಬಹಳ ಕಷ್ಟವಾಗಿದೆ ಎಂದು ಹೇಳಿದರು. ಈ ಕಾರಣದಿಂದ ನಾನು ಈ ತಿದ್ದುಪಡಿಯಲ್ಲಿ ಸೇರಿಸಿರತಕ್ಕದ್ದು. ಸಾಧಾರಣವಾಗಿ ಸಂಬಳ ಎಷ್ಟು ಗೊತ್ತು ಮಾಡಿದ್ದಾರೆ ಮತ್ತು ಸಂಬಳ ಎಷ್ಟು ಕೊಟ್ಟಿದ್ದಾರೆ ಎಂದು ಬರೆದರೆ ಅವರಿಗೆ ಸ್ವಲ್ಪ ಧೈರ್ಯ ಬಂದು ಟ್ರೆಬ್ಯೂನಲ್‌ಗೆ ಹೋಗಿ ಬರೆಸಿಕೊಳ್ಳತಕ್ಕ ಸಂಬಳಕ್ಕಿಂತ ಕಡಿಮೆ ಸಂಬಳ ಕೊಡುತ್ತಿದ್ದಾರೆಂದು ಹೇಳುವದಕ್ಕೆ ದಾಖಲೆಯಾಗುತ್ತದೆ. ಆದ್ದರಿಂದ ಈ ದಾಖಲೆ ಅವರು ರಿಜಿಷ್ಟರಿನಲ್ಲಿ ಸೇರಿಸಬೇಕೆಂದು ತಿದ್ದುಪಡಿ ತಂದಿದ್ದೇನೆ.

12 Noon

ಇನ್ನು "Rules and regulations relating to the code of

conduct and conditions of service governing employees'' ಎಂದು ಹೇಳಿ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದಾರೆ. ಅಂದರೆ ಉಪಾಧ್ಯಾಯರು ಯಾವ ರೀತಿ ನಡೆದುಕೊಳ್ಳಬೇಕು ಮತ್ತು ಅವರ ಸರ್ವೀಸ್ ಕಂಡೀಷನ್ಸ್ ಏನು ಎನ್ನುವ ಬಗ್ಗೆ ತಿದ್ದುಪಡಿ ತೆಗೆದುಕೊಂಡು ಬಂದಿದ್ದಾರೆ ನಾನು ಇಲ್ಲಿ Duties of the teachers ಎನ್ನತಕ್ಕದ್ದನ್ನು ಅದರ ಜೊತೆಗೆ ಸೇರಿಸಿ ಎಂದು ಹೇಳಿದ್ದೇನೆ ಉಪಾಧ್ಯಾಯರ ಬಗ್ಗೆ ಸಾಕಾದಷ್ಟು ಗೌರವ ಇದೆ ಮತ್ತು ಅವರು ಮಾಡು ತ್ತಾ ಇರತಕ್ಕ ಕೆಲಸದ ಬಗ್ಗೆ ನನಗೆ ಸಾಕಾದಷ್ಟು ಮೆಚ್ಚುಗೆ ಇದೆ ಆದರೆ ಅನೇಕ ಶಾಲೆ ಗಳಲ್ಲಿ ಈಚೆಗೆ ನಮ್ಮ ವಿದ್ಯಾಭ್ಯಾಸದ ಮಟ್ಟ ಕಡಿಮೆಯಾಗಿ ಕೆಲವು ಉಪಾಧ್ಯಾಯರು ಸಾಕಾದಷ್ಟು ಶ್ರದ್ಧೆಯನ್ನು ತೆಗೆದುಕೊಳ್ಳುತ್ತಾ ಇಲ್ಲ ಎನ್ನತಕ್ಕದ್ದು ನಮಗೆ ಕಂಡು ಬರುತ್ತದೆ. ಉಪಾಧ್ಯಾಯರ ವೃತ್ತಿ ಬಹಳ ಶ್ರೇಷ್ಠವಾದ ವೃತ್ತಿ. ನಮ್ಮ ಮುಂದಿನ ಸತ್ಪ್ರಜೆಗಳನ್ನು ತಿದ್ದತಕ್ಕಂಥ ಮತ್ತು ಅವರನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವ ಕೆಲಸ ಉಪಾಧ್ಯಾಯರ ಮೇಲೆ ಇದೆ. ಉಪಾಧ್ಯಾಯನಾಗಿ ನನಗೆ ಇರತಕ್ಕ ಅನುಭವ ದಿಂದ ಹೇಳಬೇಕಾದರೆ, ಉಪಾಧ್ಯಾಯನು ತನ್ಯ ಹಕ್ಕು ಬಾಧ್ಯತೆಯ ನ್ನು ಯಾವರೀತಿ ಹೇಳುತ್ತಾನೋ ಅದೇ ರೀತಿ ತನ್ನ ಕರ್ತವ್ಯಗಳ ಬಗ್ಗೆ ಸಾಕಾದಷ್ಟು ಗಮನ ಕೊಡು ವದು ಅತಿ ಮುಖ್ಯವಾದುದು. ಸರ್ಕಾರದವರು ಹಿಂದಿನ ಕಾಲದಲ್ಲಿ ನಮಗೆ ತಿಳಿದ ಹಾಗೆ ಗ್ರಾಜುಯೇಟ್, ಟೀಚರ್ಸ್‌ಗೆ ೨೫ ರೂಪಾಯಿ ಕೊಡುತ್ತಿದ್ದರು. ಈಗ ಸಾಧಾರಣವಾಗಿ ೨೫೦ ರೂಪಾಯಿಗೆ ಕಡಿಮೆ ಇಲ್ಲದ ಗ್ರಾಜುಯೇಟ್ ಟೀಚರ್ಸ್‌ಗೆ ಸಿಗುತ್ತದೆ. ಸರ್ಕಾರದ ಎಜುಕೇಷನ್ ಬಡ್ಜೆಟ್‌ಗೆ ಕೂಡ ಹಿಂದೆ ೬–೭ ಕೋಟಿ ಇದ್ದದ್ದು ಈಗ ೬೬ ಕೋಟಿ ತನಕ ಆಗಿದೆ ಸರ್ಕಾರದವರು ಸಾಕಾದಷ್ಟು ವಿದ್ಯಾಭ್ಯಾಸ ಜೆನ್ನಾಗಿ ಆಗಬೇಕು, ವಿದ್ಯಾರ್ಥಿಗಳು ಸರಿಯಾದಂಥ ಶಿಕ್ಷಣ ಪಡೆಯಬೇಕು ಎನ್ನುವ ಧ್ಯೇಯ ಇಟ್ಟುಕೊಂಡು ಉಪಾಧ್ಯಾಯರ ಸ್ಥಿತಿಗತಿಗಳನ್ನು ಉತ್ತಮ ಪಡಿಸ ಬೇಕು ಎಂದು ಇದ್ದಾರೆ. ಆದುದರಿಂದ ಉಪಾಧ್ಯಾಯರು ಹೇಗೆ ತಮ್ಮ ಹಕ್ಕು ಬಾಧ್ಯತೆಯನ್ನು ಕೇಳುತ್ತಾರೋ ಅದೇ ರೀತಿ ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಮಾಡಿಕೊಂಡು ಹೋಗಬೇಕು ಎಂದು ತಿದ್ದುಪಡಿ ತಂದಿದ್ದೇನೆ. ಉಪಾ ಧ್ಯಾಯನು ಪಾಠ ಹೇಳುವ ಬಗ್ಗೆ ಮತ್ತು ಶಿಸ್ತಿನ ಬಗ್ಗೆ ಕೆಲಸಕ್ಕೆ ಸರಿಯಾಗಿ ಹೋಗುವ ಬಗೆ ಮತ್ತು ತನ್ನ ನಡತೆಯ ಬಗ್ಗೆ ಸರಿಯಾದ ರೀತಿಯಲ್ಲಿ ವಿದ್ಯಾರ್ಥಿ ಗಳಿಗೆ ಮಾರ್ಗದರ್ಶಕವಾಗಿರಬೇಕು ಎನ್ನುವ ಉದ್ದೇಶದಿಂದ ತಿದ್ದುಪಡಿ ತಂದಿದ್ದೇನೆ. ಇದನ್ನು ಒಪ್ಪಿಕೊಳ್ಳಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು ನನ್ನ ಎರಡು ಮಾತನ್ನು ಪೂರೈಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಧ್ಯಕ್ಷಿಣಿಯರೇ, ನಾನು ತಂದಿರುವ ಎರಡು ತಿದ್ದುಪಡಿಗಳು ಸಹ ಅತಿ ಮುಖ್ಯವಾದುವು. ಮೊದಲನೆಯದು (3)1 ರಲ್ಲಿ Schedule of appointment indicating the number of persons employed by it, their qualifications and grades of pay ಎಂದು ಮಾತ್ರ ಇದೆ. ನಾನು ತಿಳಿದಮಟ್ಟಿಗೆ ಈ ಕ್ಲಾಸಿನ ಉದ್ದೇಶ ಏನೆಂದರೆ,

ಮೇಷ್ಟರು ಎಷ್ಟು ಸಂಬಳ ಪಡೆಯುತ್ತಾರೆ, ಏನು ಕೆಲಸ ಮಾಡುತ್ತಾರೆ, ಅರ್ಹತೆಗಳು ಏನು ಇವೆ, ಅನೆಲ್ಲವೂ ಸಮಗ್ರವಾಗಿ ಬೋರ್ಡ್ ಆಫ್ ಮ್ಯಾನೇಜಮೆಂಟಿಗೆ ಗೊತ್ತಿರ ಬೇಕು, ಸರ್ಕಾರಕ್ಕೆ ಗೊತ್ತಾಗಬೇಕು. ನಾಳೆಯ ದಿವಸ ತಪ್ಪುಮಾಡಿದ ಪಕ್ಷದಲ್ಲಿ ಮಾಸ್ಟ್ರುಗಳಿಗೆ ಏನಾಕಾರಣ ತೊಂದರೆ ತಕರಾರು ಕೊಟ್ಟರೆ ಅದನ್ನು ಸರಿಪಡಿಸುವು ದಕ್ಕಾಗಲಿ, ರೆಗ್ಯುಲೇಟ್ ಮಾಡುವದಕ್ಕಾಗಲಿ ಅವಕಾಶವಾಗುತ್ತದೆ ಎನ್ನುವ ದೃಷ್ಟಿ ಯಿಂದ ಈ ಕ್ಲಾಜನ್ನು ತೆಗೆದುಕೊಂಡು ಬಂದಿದ್ದಾರೆ ಎಂದು ನನ್ನ ಅಭಿಪ್ರಾಯ. ಇದರಲ್ಲಿ ಸೇರಿಸಿರುವ ಅಂಶ ಬರೀ ಎಷ್ಟು ಜನ ಮೇಷ್ಟರುಗಳು ಇದ್ದಾರೆ; ಇನ್ಸ್‌ಟಿಟ್ಯೂಟ ದಲ್ಲಿ ಮತ್ತೆ ಅವರ ಅರ್ಹತೆಗಳು ಏನಿವೆ ಬಿ. ಎಸ್ಸಿ., ಬಿ. ಇಡಿ. ಏನು ಓದಿದ್ದಾರೆ ಸಂಬಳ ಮತ್ತು ಗ್ರೇಡ್ಸ್ ಆಫ್ ಪೇ ಮ್ಯಾನೇಜಮೆಂಟಿನವರು ಏನು ಕೊಡುತ್ತಿದ್ದಾರೆ ಎಂಬುದು.. ಒಂದು ವಿಷಯ ಶಾಮಣ್ಣನವರು ಹೇಳಿದರು ಅದನ್ನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಸಾಮಾನ್ಯವಾಗಿ Private educational Schoolಗಳಲ್ಲಿ ೪೦ ಜನ ಇದ್ದರೆ; ೫೦ ಜನ ಇದ್ದಾರೆಂದು ಹೇಳುತ್ತಾರೆ ಸರ್ಕಾರದ ಗ್ರೇಡ್ಸ್ ಆಫ್ ಪೇ ಏನು ಇದೆ ಅದನ್ನು ಬರೆದುಕೊಂಡಿರುತ್ತಾರೆ. ಈಗ ಏನಾಗಿದೆ ಯೆಂದರೆ, ಕೆಲವು ಮೇಷ್ಟರುಗಳನ್ನು ಬೇರೆ ಕೆಲಸಕ್ಕೆ ಉಪಯೋಗಿಸುತ್ತಾರೆ ಸಂಬಳ ಕಡಮೆ ಕೊಡುತ್ತಾರೆ. ಸರ್ಕಾರಿ ಸಂಬಳ ಕೊಡುತ್ತೇವೆಂದು ಹೇಳುತ್ತಾರೆ. ಇನ್ಸ್ ಪೆಕ್ಷನ್‌ಗೆ ಬಂದು ಕೇಳಿದಾಗ ಪುಸ್ತಕದಲ್ಲಿ ಹೆಸರು ಇರುವುದಿಲ್ಲ. ಏನು ಕೆಲಸ ಮಾಡುತ್ತಾರೆಂದು ಹೇಳುವುದಕ್ಕೆ ಪ್ರೂಫ್ ಇರುವುದಿಲ್ಲ. ಹೀಗಾಗಿ ಅನೇಕ ಮೇಷ್ಟರು ಗಳಿಗೆ ತೊಂದರೆಯಾಗಿದೆ. ಮೇಷ್ಟರಾಗಿ ಕೆಲಸ ಮಾಡುತ್ತಾ ಇದ್ದರೆ ಮೇಷ್ಟರು ಎಂದು ಬರೆದಿರುವುದಿಲ್ಲ. ಆದುದರಿಂದ ನಾನು ತಂದಿರುವ ಸೂಚನೆ ಏನೆಂದರೆ, ಅವರಿಗೆ ಒಂದು ಡೆಸಿಗ್‌ನೇಷನ್ ಇರಬೇಕು. ಅವರು ಪ್ಯೂನೇ, ಟೀಚರರೇ ಇಲ್ಲವೆ ಲೆಕ್ಚರರೇ ಎಂದು ಡೆಸಿಗ್‌ನೇಷನ್ ಇರಬೇಕು. ಆದು ಇಲ್ಲದೇ ಹೋದರೆ ಅವರನ್ನು ಎಕ್ಸ್‌ಪ್ಲಾಯರೇಷನ್ ಮಾಡುವುದಕ್ಕೆ ಅಥವಾ ಹೆರಾಸ್ ಮಾಡುವುದಕ್ಕೆ ಅವಕಾಶ ವಾಗುತ್ತದೆ. ನೀವು ಆದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ.

ಎರಡನೇಯದು Date of entry into service ಬಹಳ ಮುಖ್ಯ- ಅಕ್ವೆಟೆನ್ಸ್ ರೋಲನಲ್ಲಿ Date of entry into service ಇರುವುದಿಲ್ಲ. ಸುಮ್ಮನೆ ಹೆಸರು ಬರೆದಿರುತ್ತಾರೆ. ಕನ್‌ಫರ್ಮ್ ಆಗಿದೆಯೋ ಇಲ್ಲವೋ ಗೊತ್ತಾಗುವುದಿಲ್ಲ. ನಾನಂತು ಕೆಲವು ಸ್ಕೂಲುಗಳನ್ನು ಹೋಗಿ ನೋಡಿದ್ದೇನೆ. ಮಲ್ಲೇಶ್ವರಂ ಕಾನ್ ಸ್ಟಿಟ್ಯೂಯೆನ್ಸಿಯಲ್ಲಿ ಪವರ್‌ಫುಲ್ ಪೀಪಲ್ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ರಿಜಿಷ್ಟರಿನಲ್ಲಿ Date of entry into service ಇರುವುದಿಲ್ಲ. ಆದುದರಿಂದ ನಾಳೆಯ ದಿವಸ ತೊಂದರೆಯಾದರೆ, ಮೇಷ್ಟರುಗಳನ್ನು ಮನೆಗೆ ಕಳಿಸುತ್ತಾರೆ. ಎಜ್ಯುಕೇಷನಲ ಅಪೀಲ್ ಟ್ರಿಬ್ಯೂನಲ್ ಮಾಡಿದ್ದೀರಿ. ಅವರು ಕಂಡೀಷನ್ ಆಫ್ ಸರ್ವೀಸನ್ನು ಕೂಡ ಗಮನಿಸುವುದಕ್ಕೆ ಅವಕಾಶವಿರಬೇಕು ಎಂದು ತಿದ್ದುಪಡಿ ಕಳಿಸಿ ದ್ದೇನೆ. ನಾಳೆಯ ದಿವಸ ಯಾರಾದ್ರೂ ಕಿತ್ತುಹಾಕಿದರೆ ಎಜ್ಯುಕೇಷನಲ್

ಟ್ರಿಬ್ಯೂನಲ್ ತೀರ್ಮಾನಮಾಡುವದಕ್ಕೆ ಅವಕಾಶ ಇರುತ್ತದೆ. ವಜಾ ಮಾಡಿರುವವರನ್ನು ಪುನ: ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದಾಗ ಅವರ ಹಿಂದಿನ ಸಂಬಳ ಎಷ್ಟಿತ್ತು, ಯಾವ ಕೆಲಸಕ್ಕೆ ಸೇರಿದರು ಎನ್ನುವ ಮಾತು ಬರುತ್ತದೆ. ಹೀಗೆ ಈ ಎರಡು ತಿದ್ದುಪಡಿಗಳು ಬಹಳ ಮುಖ್ಯವಾದುವು. Both entry into service as well as designation ಎರಡನ್ನೂ ಷೆಡ್ಯೂಲ್ ಆಫ್ ಅಪಾಯಿಂಟಮೆಂಟಿನಲ್ಲಿ ನಮೂದು ಮಾಡಬೇಕು. ಅದು ಇಲ್ಲದೇ ಹೋದರೆ We will be defeating the very purpose of the educational appellate tribunal and defeating very object of the Bill itself. ಇದು ಮೊದಲನೆ ಸೂಚನೆ ಮತ್ತು ಇದಕ್ಕಿಂತ ಬಹಳ ಪ್ರಾಮುಖ್ಯವಾದುದು ಎರಡನೇಯದು. Rules and regulations. Code of conduct governing employess ಎಂದು ಇದೆ. It shall be in accordance with the model rules prescribed and published by the G vernment. ಎಂದು ನಾನು ಹೇಳಿರುವುದು. ಒಂದು ಬಹಳ ಸಂತೋಷದ ಸಂಗತಿ ಏನೆಂದರೆ, ಮಾನ್ಯ ಮಂತ್ರಿಗಳು ಮಾಡೆಲ್ ರೂಲ್ಸ್ ಬಗ್ಗೆ He has reacted well. I am very happy and I congratulate the Hon. Minister for education. ೧೦(ಎ ಅದು ಬಂದಾಗ ಅದರ ಬಗ್ಗೆ ಮಾತನಾಡಬೇಕಾಗುತ್ತದೆ. ಕೆಲವರು ತಪ್ಪಿಸಿಕೊಳ್ಳುವುದಕ್ಕೆ ಇರುವ ರೀತಿಯಲ್ಲಿ ನಿಮ್ಮ ಅಮೆಂಡ್‌ಮೆಂಟ್ ಇದೆ ಎಂದು ನನ್ನ ಅಭಿಪ್ರಾಯ ಆದುದರಿಂದ ನಾನು ತಿದ್ದುಪಡಿಗಳನ್ನು ಬರೆದು ಕಳಿಸಿದ್ದೇನೆ. ಮೂಲ ಭೂತವಾಗಿ ಇವತ್ತು ಮಾಡೆಲ್ ರೂಲ್ಸ್‌ನ್ನು ಒಪ್ಪಿಕೊಳ್ಳಲೇಬೇಕೆಂದು ಮಾಡೆಲ್ ರೂಲ್ಸ್ ಇಲ್ಲದೇ ಹೋದರೆ, ತಪ್ಪಿಸಿಕೊಂಡು ಹೋಗುತ್ತಾರೆ. ಒಬ್ಬೊಬ್ಬರು ಒಂದೊಂದು ರೀತಿ ರೂಲ್ಸ ಮಾಡಿಕೊಂಡು ಹೋಗುತ್ತಾರೆ. ಅದನ್ನು ಅಮೆಂಡ್ ಮಾಡುವುದಕ್ಕೆ ಅನಕಾಶವಿರುತ್ತದೆ. ೬ ತಿಂಗಳಿಗೊಮ್ಮೆ ತಿದ್ದುಪಡಿ ಮಾಡಬಹುದು ಎಂದಿದೆ. ಮ್ಯಾನೇಜಮೆಂಟಿನವರು ಅವರ ವಿನ್ಸ್ ಮತ್ತು ಫ್ಯಾನ್ಸೀಸ್‌ಗೆ ತಕ್ಕಂತೆ ತಿದ್ದುಪಡಿಗಳನ್ನು ಟೀಚರ್ಸ್ ವಿರುದ್ಧ ಮಾಡಿಕೊಂಡು ಹೋಗಬಹುದು. ಆದುದರಿಂದ ಮಾಡೆಲ್ ರೂಲ್ಸ್ ಮಾತ್ರ ಸ್ಪಷ್ಟವಾಗಿ ಇರಬೇಕು ಎಂದು ನನ್ನ ಅಭಿಪ್ರಾಯ.

ಎರಡನೆಯದು, ಮಾಡೆಲ್ ರೂಲ್ಸ ತಿದ್ದುಪಡಿ ಮಾಡಬೇಕಾದರೆ, ಸರ್ಕಾರವನ್ನು ಕೇಳದೇ ತಿದ್ದುಪಡಿ ಮಾಡುವ ಹಾಗಿಲ್ಲ. ಈಗ ಈ ಬಿಲ್‌ನಲ್ಲಿ ಅದನ್ನು ಅಳವಡಿಸಿಕೊಂಡರೆ ಅನಾಹುತ ಏನೂ ನಡೆದು ಹೋಗುತ್ತದೆ? ಅನೇಕರಿಗೆ ಸ್ವಲ್ಪಮಟ್ಟಿಗೆ ರಿಲೀಫ ಕೊಟ್ಟ ಹಾಗೆ ಆಗುತ್ತದೆ. ಪೂರ್ತಿ ರಿಲೀಫ್ ಕೊಡದೆ ಹೋದರೂ, ತತ್ವವನ್ನು ಒಪ್ಪಿಕೊಂಡಿರುವುದು ಸಂತೋಷದ ವಿಷಯ. ಇದನ್ನು ಸ್ವಲ್ಪ ಮಾಡಿಫೈ ಮಾಡಬೇಕು ಎಂದು ನಾನು ಹೇಳುತ್ತೇನೆ. ಇದರಿಂದ ಘಟನಾವಳಿಗಳಿಗೆ ವಿರೋಧ

ಬರುವದಿಲ್ಲ, ಯಾವದಕ್ಕೂ ವಿರೋಧ ಬರುವದಿಲ್ಲ. ಎರಡನ್ನೂ ಒಪ್ಪಿಕೊಂಡಿರುವದರಿಂದ, ಇನ್ನೊಂದನ್ನೂ ಸಹ ಒಪ್ಪಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರಿ ಎ. ಆರ್. ಬದರೀನಾರಾಯಣ — ಈಗ ಶ್ರೀಮಾನ್ ಶಾಮಣ್ಣನವರು pay fixed and actually paid ಈ ಒಂದು ಅಮೆಂಡ್‌ಮೆಂಟ್‌ನ್ನು ಸೇರಿಸಬೇಕು ಒಂದು ತಂದಿದ್ದಾರೆ. ಅದೂ ಅಲ್ಲದೆ duties of the teachers ಇದ್ದೂ ಕೂಡ ಸೇರಿಸಬೇಕು ಇಂದು ತಿಳಿಸಿದ್ದಾರೆ ಹಾಗೂ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು date of entry into service and designation ಇದನ್ನೂ ಕೂಡ ಸೇರಿಸಬೇಕು ಎಂದು ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ ಬಹುಶಃ ಆಕ್ಟ್‌ನಲ್ಲಿ ಈ ತರಹ ವಿವರಗಳನ್ನು ಬರೆಯುವದು ಸೂಕ್ತವಲ್ಲ ಎಂದು ನನ್ನ ಅಭಿಪ್ರಾಯ. ಮತ್ತು ಇವನ್ನೆಲ್ಲಾ ಮಾಡಲ್ ರೂಲ್ಸ್‌ನಲ್ಲಿ ತರಬಹುದು ಎಂದು ನನ್ನ ಅಭಿಪ್ರಾಯವಾಗಿದೆ ಏತಕ್ಕೆಂದರೆ ಪುನ: ಈ ಉಪಾಧ್ಯಾಯರುಗಳಿಗೆ ಜಾಸ್ತಿ ಪ್ರೊಟೆಕ್ಷನ್ ಬೇಕಾದರೆ ಕ್ಲಾಸ್ ೧೦(ಎ) ಬಂದಾಗ ಸರ್ಕಾರದವರು ಅದನ್ನು ಯೋಚನೆ ಮಾಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಕೃಷ್ಣನ್‌ರವರು ಒಂದು ಸಲಹೆ ಮಾಡಿದ್ದಾರೆ.ಇದರ್ನು ಮಾಡಲ್ ರೂಲ್ಸ್‌ನಲ್ಲಿ ಏತಕ್ಕೆ ತರಬಾರದು ಎಂದು ಹೇಳಿದಾಗ We thought about the matter and we have introduced it as Clause 10-A wherein Government will take powers to frame Model Rules. ಮಾಡಲ್ ರೂಲ್ಸ್ ಇದರೊಳಗೆ ಮಾನ್ಯ ಶಾಮಣ್ಣನವರು ಮತ್ತು ಮಾನ್ಯ ಕೃಷ್ಣನ್‌ರವರೂ ಈ ಇಬ್ಬರೂ ಕೂಡ ಕೊಟ್ಟಂಥ ಸಲಹೆಯನ್ನು ಜಾರಿಗೆ ತರಬಹುದು ಎಂದು ನನಗೆ ಕಾಣುತ್ತದೆ. ಅವರು ಮಾಡಲ್ ರೂಲ್ಸ್ ಬಗ್ಗೆ ಒಂದು ಅಮೆಂಡ್‌ಮೆಂಟ್ ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ನಾವೇ ಒಂದು ಅಮೆಂಡ್‌ಮೆಂಟ್ ತಂದಿರುವದರಿಂದ ಆ ವಿಷಯದಲ್ಲಿ ಹೇಳುವ ಅವಶ್ಯಕತ ಇಲ್ಲ ಎಂದು ನನಗೆ ಕಾಣುತ್ತದೆ. ಈ ಇಬ್ಬರೂ ಸದಸ್ಯರೂ ಕೂಡ ತಂದಿರತಕ್ಕ ಅಮೆಂಡ್‌ಮೆಂಟ್‌ನ್ನು ನಾವು ಒಪ್ಪಿಕೊಂಡಾಗ ಈ ಬಗ್ಗೆ ಪ್ರೆಸ್ ಮಾಡದೆ ಅವರು ತಂದಿರತಕ್ಕಂಥ ಅಮೆಂಡ್‌ಮೆಂಟ್‌ನ್ನು ವಿತ್‌ಡ್ರಾ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ — ಉಪಾಧ್ಯಾಯರುಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಮಾಡಲ್ ರೂಲ್ಸ್ ತರುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮತ್ತು ಇದರಲ್ಲಿ ನಾನು ಕೊಟ್ಟಿರತಕ್ಕಂಥಾದನ್ನೂ ಕೂಡ ಯೋಜನೆ ಮಾಡಿ ಸಾಧ್ಯವಾದಷ್ಟು ಅದನ್ನು ಸೇರಿಸುವದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರಲ್ಲಿ ಮುಖ್ಯವಾಗಿ ನಾನು ಅರಿಕೆಮಾಡಿಕೊಳ್ಳುವದು ಏನೆಂದರೆ ಉಪಾಧ್ಯಾಯರಿಗೆ ಕೊಡತಕ್ಕಂಥ ಸಂಬಳ ಸರ್ಕಾರದವರು ಕೊಡತಕ್ಕಂಥ ಸಂಬಳ ಅದರಿಂದಲೇ ಅವರು ಜೀವನ ಮಾಡುವದರಿಂದ ವಿದ್ಯಾರ್ಥಿಗಳಿಗೆ ಸಾಕಾದಷ್ಟು ವಿದ್ಯಾರ್ಜನೆ ಆಗುವಂತೆ ಶಿಕ್ಷಣ ಕೊಡಬೇಕು. ಹಾಗೆ ಅವರು ಸಾಕಾದಷ್ಟು ಆಸಕ್ತಿ

ಯನ್ನು ಸಹಿಸಿ ಕೆಲಸ ಮಾಡದೇ ಹೋದರೆ ಅವರ ಮೇಲೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ನಂಬಿ ನಾನು ತಂದಿರತಕ್ಕಂಥ ತಿದ್ದುಪಡಿಯನ್ನು ವಾಪಸ್ಸು ತೆಗೆದುಗೊಳ್ಳುವದಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಇದರಲ್ಲಿ ಕ್ಲಾಸ್ ೧೦(ಎ) ತಂದಿರುವದು ಸ್ವಾಗತಾರ್ಹ. ಇವಕ್ಕೆ ಒಂದು ತಿದ್ದುಪಡಿ ಬೇಕಾಗುತ್ತದೆ. ಆದುದರಿಂದ ಇದಕ್ಕೆ ಒಂದು ತಿದ್ದುಪಡಿ ತರುತ್ತಾರೆಂದು ನಂಬಿ ನನ್ನ ತಿದ್ದುಪಡಿಯನ್ನು ವಾಪಸ್ಸು ತೆಗೆದು ಕೊಳ್ಳುತ್ತೇನೆ.

The amendments were by leave, withdraws

MADAM SPEAKER:- The question is :

"That Clause 3 do stand part of the Bill."

The motion was adopted.

Clause 3 was added to the Bill.

CLAUSE 4

MADAM SPEAKER : There are amendments proposed by hon. members Sriyuths: T. R. Shamanna and M. S. Krishnan.

Sri T. R. SHAMANNA : I move :

"That at page 5, at the end of the proviso to sub-clause (2) the following shall be added.—

"Or if he fails to discharge his duties of a teacher in imparting instructions or misconducts himself."

"That at page 5, after sub-clause (3) (b), the following new sub-clause (c) shall be added:

"(c) representation regarding payment of lesser salary than what is legitimately due to the teacher."

MADAM SPEAKER : Amendment moved.

That at page 5 at the end of the proviso to sub-clause (2) the following shall be added.

"Or if he fails to discharge his duties of a teacher in imparting instructions or misconducts himself."

That at page 5, after sub-clause (3) (b) the following new sub-clause (c) shall be added.

"(c) representation regarding payment of lesser salary than what is legitimately due to the teacher."

Sri M. S. KRISHNAN Madam : I move : "That at page 4 sub-clause (3) at the end the following words shall be inserted :

"However no alteration or modification in contravention of the Model rules shall be made."

That at page 5, sub-clause 2, line 2, after the words "reduced in rank," the words "or given any other punishment" shall be added;

That at page 6, at the end of the proviso to sub-clause (2) the following shall be added.

"involving moral turpitude. No separate enquiry shall be conducted by the Board of Management on grounds in respect of which criminal proceedings have been lunched or are pending against them."

That at page 5, in Clause 4 (2) after the first proviso the following second proviso shall be inserted.

"Provided that an employee who has been suspended pending enquiry be paid half the salary every month till th enquiry is concluded or till the suspension against him is lifted. If the enquiry goes beyond a period of three months due to no fault of the employee, such employee shall be paid 75% (Seventy Five percent) of his salary for the period of suspension."

Madam Speakar : Amendament moved,

That at page 4, sub-clause (3), at the end the following words shall be inserted :

"However no alteration or modification in contravention of the Model rules shall be made."

That at page 5, sub-clause 2, line 2, after the words ' reduced in rank " the words "or given any other punishment" shall be added;

That at page 6, at the end of the proviso to sub-clause (2) the following shall be added.

"involving moral turpitude. No separate enquiry shall be conducted by the Board of Management on grounds in respect of which criminal proceedings have been launched or are pending against them."

That at page 5, in Clause 4 (2) after the first proviso the following second proviso shall be inserted :

"Provided that an employee who has been suspended pending enquiry be paid half the salary every month till the enquiry is concluded or till the suspension against him is lifted. If the enquiry goes beyond a period of three months due to no fault of the employee, such employee shall be paid 75% (Seventy Five percent) of his salary for the period of suspension."

† ಶ್ರೀ ಟಿ. ಆರ್. ಶಾಮಣ್ಣ.—ಈಗ ತಾವು ಈ ಬಿಲ್‌ನಲ್ಲಿ ಕ್ಲಾಸ್ ೪ ರಲ್ಲಿ ಈ ರೀತಿ ಕೊಟ್ಟಿದ್ದೀರಿ : Termination of service and procedure for imposing penalties ಎಂದು. ಈ ಒಂದು ರೂಲ್‌ನಲ್ಲಿ ಟರ್ಮಿನೇಷನ್ ಆಫ್ ಸರ್ವಿಸನ್ ಮಾಡುವುದಕ್ಕೆ ಏನು ಪ್ರೊಸೀಜರ್ ಇದೆ ಎನ್ನುವುದನ್ನು ಕೊಟ್ಟಿದ್ದೀರಿ. ಅದು ಕ್ಲಾಸ್ ೪ರಲ್ಲಿ ಸಬ್ ಸೆಕ್ಷನ್ ೨ ರಲ್ಲಿ ಈ ರೀತಿ ಪ್ರೊವಿಷನ್ ಹಾಕಿದ್ದೀರಿ ಅದು ಏನೆಂದರೆ: "Provided that the provisions of this sub-section shall not apply where an employee is dismissed or removed or reduced in rank on the ground of conduct which has led to his conviction on a criminal charge" ಅಂತ ಇದೆ. ಈ ಕ್ರಿಮಿನಲ್ ಛಾರ್ಜನ್‌ನಲ್ಲಿ ಯಾರನ್ನಾದರೂ ಟೀಚರ್ಸ್‌ನ್ನು ಡಿಸ್‌ಮಿಸ್ ಮಾಡಿದರೆ ಆವಾಗ ಟರ್ಮಿನೇಷನ್ ಆಫ್ ಸರ್ವಿಸಸ್‌ಗೆ ನೋಟೀಸ್ ಕೋಡಬೇಕಾದ್ದಿಲ್ಲ ಎನ್ನುವುದನ್ನು ತಂದಿದ್ದೀರಾ. ಇದರಲ್ಲಿ ನನ್ನ ವಾದ ಏನೆಂದರೆ ಉಪಾಧ್ಯಾಯರುಗಳು ವಿದ್ಯಾರ್ಥಿಗಳ ವ್ಯವಸಂಗದ ಬಗ್ಗೆ ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಮಾಡದೇ ಹೋದರೆ, ಮತ್ತು ಅವರು ತಮ್ಮ ಕರ್ತವ್ಯದಲ್ಲಿ ಅಸಡ್ಡೆಯನ್ನು ತೋರಿಸಿದರೆ, ಅವರು ಸರ್ಕಾರದ ಸಂಬಳ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿಸದೇ ಹೋದರೆ ಅದೂ ಕೂಡ ಕ್ರಿಮಿನಲ್ ಛಾರ್ಜ್. ಏತಕ್ಕೆಂದರೆ ಈ ಶಿಷ್ಯರನ್ನು ಸರಿಯಾದಂಥ ರೀತಿಯಲ್ಲಿ ತಯಾರು ಮಾಡತಕ್ಕಂಥಾದ್ದೂ ಒಂದು ಹೆಚ್ಚಿನ ಜವಾಬ್ದಾರಿ ಉಪಾಧ್ಯಾಯರಲ್ಲಿ ಇರುವುದರಿಂದ ಅವರು ಸರ್ಕಾರದ ಸಂಬಳ ತೆಗೆದುಕೊಂಡ ಮೇಲೆ ಅದಕ್ಕೆ ತಕ್ಕಂತೆ ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಹೋದರೆ ಅದೂ ಕೂಡ ಕ್ರಿಮಿನಲ್ ಛಾರ್ಜ ಎಂದು ನನ್ನ ಭಾವನೆ. ಆದುದರಿಂದ ನಾನು ಈ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಅದು ಈ ರೀತಿ ಇದೆ : "Or if he fails to discharge his duties of a teacher in imparting instructions or misconducts himself." ಈ ಬಗ್ಗೆ ಹೇಳುವುದಾದರೆ ಅನೇಕ ವಿದ್ಯಾಶಾಲೆಗಳಲ್ಲಿ ಅದರಲ್ಲೂ ಹಳ್ಳಿಗಳಲ್ಲಿ ಉಪಾಧ್ಯಾಯರುಗಳು ಸ್ಕೂಲುಗಳಿಗೇ ಹೋಗುವುದಿಲ್ಲ. ಒಂದು ವೇಳೆ ಹೋದರೂಕೂಡ ಅಲ್ಲಿ ಕ್ಲಾಸಿನಲ್ಲಿರುವ ಮಾನಿಟರ್‌ನ್ನು ನೋಡಿಕೊ ಎಂದು ಹೇಳಿಬಿಟ್ಟು ಹೊರಟು ಹೋಗುತ್ತಾರೆ ಅಷ್ಟೇ ಅಲ್ಲದೆ ಕೆಲವು

ವೇಳೆ ಕ್ಲಾಸನ್ನು ಕಂಬೈನ್ಡ್ ಮಾಡಿ ಹೇಳಿಬಿಟ್ಟು ಹೊರಟ್ಟು, ಹೋಗುತ್ತಾರೆ. ಇಂಥ ಸಂದರ್ಭದಲ್ಲಿ ಉಪಾಧ್ಯಾಯರ ಮೇಲೆ ಸರಿಯಾದ ಹತೋಟಿ ಇಟ್ಟುಕೊಳ್ಳದೇ ಹೋದರೆ ವಿದ್ಯಾರ್ಥಿಗಳಿಗೆ ಅವರಿಂದ ಸರಿಯಾದ ವಿದ್ಯಾರ್ಜನೆ ಆಗುವುದಿಲ್ಲ ಆದುದರಿಂದ ಈ ಒಂದು ತಿದ್ದುಪಡಿಯನ್ನು ಇದರಲ್ಲಿ ಸೇರಿಸಬೇಕು ಎಂದು ತಂದಿದ್ದೇನೆ.

ಇನ್ನು ಎರಡನೆಯದಾಗಿ ಉಪಾಧ್ಯಾಯರಿಗೆ ಸಂಬಳ ಕೊಡುವುದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಈಗಾಗಲೆ ಮಾನ್ಯ ಮಂತ್ರಿಗಳು ಉಪಾಧ್ಯಾಯರಿಗೆ ಸರ್ಕಾರದಿಂದ ಏನು ಹಣಬೇಕೋ ಅದನ್ನು ಸಲ್ಲಿಸುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆ ಕೊಟ್ಟಿರುವುದರಿಂದ ಅದರ ಬಗ್ಗೆ ನಾನು ಒತ್ತಾಯ ಮಾಡುವುದಿಲ್ಲ.

†ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷಿಣಿಯವರೇ. ಇದರ ಬಗ್ಗೆ ನಾನು ಒಂದು ತಿದ್ದುಪಡಿಯನ್ನು ಏನು ತಂದಿದ್ದೇನೆ, ಅದರಲ್ಲಿ ಒಂದನ್ನು ಮಾನ್ಯ ಮಂತ್ರಿಗಳು ಈಗಾಗಲೇ ಒಪ್ಪಿಕೊಂಡಿದ್ದಾರೆ. ಅದು ಕ್ಲಾಸ್ ೧೦ (ಎ) ನಲ್ಲಿ ಬರುತ್ತದೆ. ಇನ್ನೊಂದು ತಂದಿರತಕ್ಕಂಥ ತಿದ್ದುಪಡಿಯನ್ನು ಡೇಜ್ ೪ ಸಬ್ ಕ್ಲಾಸ್ ೩ರಲ್ಲಿ ಈ ರೀತಿ ಸೇರಿಸಬೇಕು ಎಂದು ಹೇಳುತ್ತೇನೆ. ಅದು ಈ ರೀತಿ ಇದೆ : "However no alteration or modification in contravention of the Model rules shall be made" ಇದನ್ನು ಬೇರೆ ರೀತಿಯಲ್ಲಿ ೧೦ (ಎ) ನಲ್ಲಿ ತೆಗೆದು ಕೊಂಡು ಬಂದಿದ್ದೀರಿ. ಆದುದರಿಂದ ಈ ಬಗ್ಗೆ ಭರವಸೆ ಕೊಟ್ಟಿರುವುದರಿಂದ ಮೇಲೆ ಹೇಳಿದ ತಿದ್ದುಪಡಿಯನ್ನು ನಾನು ಒತ್ತಾಯ ಮಾಡುವುದಿಲ್ಲ.

But, I will have to press the other two amendments. In Sub-Clause 4(2) it is said :

> "No employee shall be dismissed or removed or reduced in rank except after an enquiry."

ಕೆಲವು ಸಂದರ್ಭಗಳಲ್ಲಿ ಎನ್‌ಕ್ವೈರಿ ಇಲ್ಲದೆ ೧೦–೧೫ ದಿವಸಗಳು ಸಸ್‌ಪೆನ್‌ಷನ್‌ನಲ್ಲಿ ಇಡುತ್ತಾರೆ, ಮತ್ತು ಇನ್‌ಕ್ರಿಮೆಂಟ್ ತಡೆಹಿಡಿಯುತ್ತಾರೆ. ಅಂಥ ಸಂದರ್ಭಗಳಲ್ಲಿ ರಕ್ಷಣೆಯನ್ನು ಕೊಡುವುದಕ್ಕೆ ಈ ಕಾನೂನಿನಲ್ಲಿ ಯಾವ ರೀತಿ ಅವಕಾಶ ಮಾಡಿದ್ದೀರಿ ?

You must read Clause 4 along with Clause 6 which says :

> "Any employee aggrieved by an order of the Board of Management may within three months from the date of communication of the order appeal against such order to the Educational Appellate Tribunal constituted under Section 7".

Only three things are contemplated here viz., dismissal, removal or reduction in rank. It must be made wider even now.

ಜೊತೆಗೆ ಉಪಾಧ್ಯಾಯರಿಗೆ ಏನಾದರೂ ಅನ್ಯಾಯವಾದರೆ ಅದನ್ನು ಕೇಳ ತಕ್ಕಂಥ ಹಕ್ಕು ಉಪಾಧ್ಯಾಯರಿಗೆ ಇರಬೇಕು. ಈ ದೃಷ್ಟಿಯಿಂದ ತಮ್ಮನ್ನು ಕೇಳಿ ಕೊಳ್ಳುವುದು ಇಷ್ಟೆ.

You must make it read :

"No employee shall be dismissed, or removed, or reduced in rank or given any other punishment except after an enquiry."

That will meet the ends of justice.

Sri A. R. BADARINARAYNA.—The Hon. Member will please refer to Clause 4 Sub-Clause (3) which says:

"No order imposing any penalty other than those referred to in sub-section (2) shall be imposed on an employee."

What the Hon. Member wants is that.

Sri M. S. KRISHNAN.—It is not comprehensive.

Sri A. R. BADARINARAYANA.—It is comprehensive.

Sri M. S. KRISHNAN.— That is one aspect. The proviso further says :

'Provided that the provision of this sub-section shall not apply where an employee is dismissed or removed or reduced in rank on the ground of conduct which has led to his conviction on a criminal charge."

If a person is reduced in rank because of conviction in a Court of Law, then, you cannot question. Supposing a person is charged with going in a procession which has been prohibited of the Govenment of Mysore. There are days of trade unionism—whether Mr. Shamnna wants it or not. The Management can terminate him for that, if he is convicted. In that case, you cannot question. Or, criminal charge may be other things. There is criminal charge which involves moral turpitude. Anything can be a criminal charge in this country. To-day the ambit is such that an employee can be brought under criminal

charge, in any manner by the Police to the detriment of the employees— to the detriment of the teachers. Supposing there is a charge that he does not go to the school properly as my friend Mr. T. R. Shamanna says, and a complaint is given to the Police. This has happened. The Police will find some other charge and take him to the Police Station. I cannot say what will happen to him. It will happen to him. It will also come under criminal charges. Does it become an action of moral turpitude ? The words 'moral turpitude' are used for all such criminal charges. Unless it is moral turpitude, it cannot be questioned at all. It is matter that is already accepted under the Government Servants' Conduct Rules and under the Industrial Law also. It has been debated and it is accepted that it should involve moral turpitude. So, I think it is very necessary that you should amend this proviso. If it is said :

> " conviction on a criminal charge involving moral turpitude "

it would be alright. If it does not involve moral turpitude they must have the right to go to the Tribunal. Otherwise it is opposed to the principles of natural justice and all canons which have been accepted by the Government today, in regard to their own administratuve rules and also to Industrial Law. I think this is a matter which should be gone into by the Hon. Minister. I request him to go into it. ಇನ್ನೊಂದು ವಿಷಯ ಹೇಳುವುದು ಇದರಲ್ಲಿ ಏನು ಎಂದರೆ ಒಂದು ಕಡೆ ಪೋಲೀಸಿನವರು ಕೇಸ ಹಾಕುತ್ತಾರೆ ಇನ್ನೊಂದು ಕಡೆ ಮ್ಯಾನೇಜಮೆಂಟಿನವರು ಸಿವಿಲರ ಜಾರ್ಜಮೇಲೆ ಟೆರ್ಮಿನೇಟ್ ಮಾಡುವುದಕ್ಕೆ ಇದರಲ್ಲಿ ಅವಕಾಶ ಕಂಡು ಬರುತ್ತದೆ.

This is akin to Industrial Law. That would be the height of unfairness. The Supreme Court has held that in all such cases the Management should not institute parallel enquiry and must wait till the court takes a decision on that particular charge. This is supposed to be the principle of natural justice. It is not question of workmen and others. The employers will on the one side, institute parallel enquiry and see that the employee is terminated

and the Court will also simultaneously go through it. If he is found guilty by the Court afterwards and if you take action, I cannot do anything about it. We know most of these managements are all doing things for their own private purposes. They are all very powerful people. In my own constituency, in one of the schools, previously, the Hon. Member of Parliament Mr. K. Hanumanthaiah our ex-Chief Minister was the Chairman of the Educational Institute. All sorts of things were going on in these Nandanavana group of Schools. Now, Mr.K Hanamanthaiah has left and Dr. Nataraj has come as the Chairman and he says: "I am the son-in-law of the Chief Minister. I can do anything." Whether the Chief Minister has told him or not, I do not know. Who can prevent teachers being harassed? Teachers are being terminated.

Sri A. R. BADARINARAYANA.— It is not correct to say all that. He has never said he is the Chief Minister's son-in-law.

12-30 P. M.

Sri M. S. KRISHNAN.– I think I can pass on the letter to you madam Speaker. I am not afraid of any body how powerful they may be. This is about Nandanavana. This gentleman has misused his power. Dr. Nataraj has misused the name of his father–in–law. Such powerful people are there all over the State. Under the circumstances I think this particular amendment which I have moved is very necessary and the teachers should not be unnecessary harassed. I plead that the teachers at the School lavel. should not be subject to preliminary proceedings. I think the Hon. Minister will accept my amendment. There is one more thing regarding the suspension period.

